RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 4 ಸಂಪುಟ 4 | Issue 07 ಸಂಚಿಕೆ 07 | Date 01-02-2025 | Page 16 ಪುಟ 16 | ಬೆಲೆ: 20/-

FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಫೋ.ನಂ: 9986366909

## ಅಧಿಕಾರ ಜವಾಬ್ದಾರಿಯೇ ವಿನಃ ಅಹಂ ಅಲ್ಲ






## ನೌಕರಿ ಅವಧಿಯಲ್ಲಿ ಜವಾಬ್ದಾರಿ ಮರೆತ ಸರ್ಕಾರಿ ಅಧಿಕಾರಿಗಳು..? !

## ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ : ನಿಯಮಗಳು ಅನ್ವಯ






## ಶಿಥಿಲಾವಸ್ಥೆಯಲ್ಲಿರುವ ಸರಕಾರಿ ಶಾಲೆಯ ಕಟ್ಟಡ: ಆತಂಕದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು

## ಕೇಳೋರು ಯಾರು ಮಕ್ಕಳು ಗೋಳು !?



## ಗ್ರಾಮ ಪಂಚಾಯತಿಯಿಂದ ನಿಮ್ಮ ಆಸ್ತಿಗೆ ಪಡೆಯಬಹುದಾದ ನಮೂನೆ–9 ಮತ್ತು ನಮೂನೆ–11 ಕುರಿತಾದ ಕಿರು ಪರಿಚಯ




## ಸಾರ್ವಜನಿಕರ ಅಚ್ಚು ಮೆಚ್ಚಿನ ಪಿ.ಡಿ.ಓ ಶ್ರೀ ಜಿ.ಐ ಬರಗಿ



## ಮುಂಡಗೋಡದ ಕಾರ್ಮಿಕ ಸಮುದಾಯ ಭವನ ಇನ್ನಷ್ಟು ಜನೋಪಯೋಗಿಯಾಗಲಿ

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ನೌಕರಿ ಅವಧಿಯಲ್ಲಿ ಜವಾಬ್ದಾರಿ ಮರೆತ ಸರ್ಕಾರಿ ಅಧಿಕಾರಿಗಳು..? !

**ಬೀದರ್/ ಬಸವಕಲ್ಯಾಣ :** ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯದ ಅವಧಿಯಲ್ಲಿ ಯಾವುದೇ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದೆಂದು ಸರ್ಕಾರದ ಕಟ್ಟುನಿಟ್ಟಿನ ಸೂಚನೆ ಮತ್ತು ಸುತ್ತೋಲೆಗಳಿವೆ. ಆದರೂ ಬಸವಕಲ್ಯಾಣದ ಕೆಲ ಇಲಾಖೆಯ ಅಧಿಕಾರಿಗಳು ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸಿ ತಮ್ಮ ಅಧಿಕಾರ ದುರುಪಯೋಗಪಡಿಸಿಕೆಳ್ಳುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ಹೊರ ಹಾಕುತ್ತಿದ್ದಾರೆ.

ಇತ್ತೀಚಿಗೆ ಈ ಬೆಳವಣಿಗೆ ತೀವ್ರವಾಗಿದ್ದು, ಬಸವಕಲ್ಯಾಣದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯದ ಅವಧಿಯಲ್ಲಿ ಜನಪ್ರತಿನಿಧಿಗಳು ಅಥವಾ ಮಠಾಧೀಶರು ಆಯೋಜಿಸಿರುವ ಕಾರ್ಯಕ್ರಮಗಳಲ್ಲಿ ಕಾಲಹರಣ ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರು ಅಧಿಕಾರಿಗಳಿಗಾಗಿ ಗಂಟೆಗಟ್ಟಲೆ ಕಚೇರಿಯಲ್ಲಿ ಕಾಯುವಂತಹ ಸ್ಥಿತಿ ನಿರ್ಮಾಣವಾಗಿದೆ.

ರಾಜ್ಯ ಸರ್ಕಾರಿ ನೌಕರರು ಕಛೇರಿಗೆ ನಿಗದಿತ ಅವಧಿಗೆ ಹಾಜರಾಗಲು ಹಾಗೂ ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುವಂತೆ ರಾಜ್ಯ ಸರ್ಕಾರದ ಸುತ್ತೋಲೆ ಇದೆ. ಆದಾಗ್ಯೂ, ಸರ್ಕಾರಿ ಅಧಿಕಾರಿಗಳಲ್ಲಿ ಸಮಯ ಪ್ರಜ್ಞೆ ಮತ್ತು ಕಾರ್ಯನಿಷ್ಠೆಯ ಕೊರತೆ ಎದ್ದು ಕಾಣುತ್ತಿದೆ.

ಬಸವಕಲ್ಯಾಣದ ದೂರದ ಗ್ರಾಮಗಳಿಂದ ಸಾರ್ವಜನಿಕರು ಸರ್ಕಾರಿ ಕಛೇರಿಯಲ್ಲಿನ ತಮ್ಮ ಕಾರ್ಯಗಳಿಗಾಗಿ ಬೆಳಗ್ಗೆ ನಿಗಧಿತ ಅವಧಿಗೆ ಸರ್ಕಾರದ ಕಛೇರಿಗಳಿಗೆ ಭೇಟಿ ನೀಡಿದಾಗ ಬಹುತೇಕ ಕಛೇರಿಗಳಲ್ಲಿ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಕಛೇರಿಗೆ ಹಾಜರಿಲ್ಲದೆ ಇರುವ ಕಾರಣ ಸಾಮಾನ್ಯ ಜನರು ಪರದಾಡುವಂತಾಗುತ್ತಿದೆ.

ಸರ್ಕಾರಿ ಅಧಿಕಾರಿಗಳು ಕಚೇರಿಗೆ ಸರಿಯಾದ ಸಮಯಕ್ಕೆ ಕಡ್ಡಾಯವಾಗಿ ಹಾಜರಾಗುವುದು ಹಾಗೂ ಕಛೇರಿ ಅವಧಿ ಪೂರ್ಣವಾಗುವವರೆಗೆ ತಮಗೆ ನಿಗದಿಪಡಿಸಿದ ಸ್ಥಾನದಲ್ಲಿ ಇದ್ದು, ಕರ್ತವ್ಯ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಡಳಿತ ಎಚ್ಚರಿಸಬೇಕಿದೆ ಈ ಮೂಲಕ ಸರ್ಕಾರಿ ಅಧಿಕಾರಿಗಳಿಂದ ನಿಗದಿತ ಸಮಯದಲ್ಲಿ ಸಾರ್ವಜನಿಕರ ಕೆಲಸಗಳು ಆಗಬೇಕಿವೆ.






**ವರದಿಗಾರರು ಶ್ರೀನಿವಾಸ ಬಿರಾದಾರ**

## ಸಂಘ, ಸಂಸ್ಥೆ, ಮಠ, ರಾಜಕಾರಣಿಗಳ ಹೆಸರಿನಲ್ಲಿ ಕೆಲಸಕ್ಕೆ ಚಕ್ಕರ್

ಕೆಲ ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯದ ಅವಧಿಯಲ್ಲಿ ಸಂಘಟನೆಗಳ ಹೆಸರಿನಲ್ಲಿ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದು ಕಂಡು ಬರುತ್ತಿದ್ದು, ಇವರ ಈ ಕಾರ್ಯಕ್ಕೆ ತಾಲೂಕಿನ ಮಠಾಧೀಶರು ಹಾಗೂ ಜನಪ್ರತಿನಿಧಿಗಳಂದ ಪ್ರೋತ್ಸಾಹ ಸಿಗುತ್ತಿರುವಂತೆ ಕಾಣುತ್ತಿದೆ. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಈ ಕಡೆ ಗಮನಹರಿಸಿ ಅಧಿಕಾರಿಗಳಗೆ ಖಡಕ್ ಸೂಚನೆಯನ್ನು ನೀಡಿ ಕರ್ತವ್ಯದ ಅವಧಿಯಲ್ಲಿ ಕಾಲಹರಣ ಮಾಡದಂತೆ ಎಚ್ಚರಿಕೆ ನೀಡಬೇಕಿದೆ.

# ಬಳಗಾನೂರ ಗ್ರಾಮದ ಸ. ಹಿ. ಉರ್ದು ಪ್ರಾಥಮಿಕ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆ



ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಬಳಗಾನೂರ ಗ್ರಾಮದ ಸರಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಧ್ವಜಾರೋಹಣವನ್ನು ಶಾಲೆಯ ಎಸ್. ಡಿ. ಎಂ. ಸಿ. ಅಧ್ಯಕ್ಷರು ಮಹಮ್ಮದ್ ವಾಲಿಕಾರ ಅವರು ನೆರವೇರಿಸಿದರು. ಶಾಲೆಯ ಮುಖ್ಯ ಗುರುಗಳು, ಸಹ ಶಿಕ್ಷಕರು ಹಾಗೂ ಊರಿನ ಗಣ್ಯರು ಹಾಗೂ ಎಪಿಜೆ ಅಬ್ದುಲ್ ಕಲಾಂ ಯುವ ಮಿತ್ರರಿಂದ ಒಂದು ಕಿರು ಕಾಣಿಕೆಯಾಗಿ ಪ್ರತಿ ವರ್ಷದಂತೆ ಈ ವರ್ಷವೂ ಎಲ್ಲಾ ಮುದ್ದು ವಿದ್ಯಾರ್ಥಿಗಳಿಗೆ ನೋಟ್ ಬುಕ್ ಮತ್ತು ಪೆನ್ ಗಳನ್ನು ಕೊಡಲಾಯಿತು.



ಊರಿನ ಗಣ್ಯರಾದ ಮಕ್ತುಮಸಾ ವಾಲಿಕಾರ , ಬಂದಗಿಸಾಬ ಮಕಾನದಾರ ,ಅಲ್ಲಿಸಾ ಬಿದರಿ, ಹುಸೇನಬಾವ ಮಕಾನದಾರ , ಸೈದುಸಾ ಸಿಕ್ಕಲಗಾರ , ಬುಡ್ಡಾ ಬಾಗವಾನ , ಬಾಬು ಶಿರೋಳ , ದಾವಲಸಾಬ ಬಾಗವಾನ , ಹಸನಸಾಬ ಬಾಗವಾನ , ಮೌಲಾಸಾಬ ವಾಲಿಕಾರ , ನಿಜಲಿಂಗ ಅಬ್ಬೀಗೇರ , ಬಸವರಾಜ ಜಾಲಿಗಿಡದ ವೇದಿಕೆ ಮೇಲೆ ಉಪಸ್ಥಿತರಿದ್ದರು.

**ವರದಿ : ಉಸ್ಮಾನ ಬಾಗವಾನ (ಬಳಗಾನೂರ)**

# ಬೇಟಿ ಬಚಾವೋ ಬೇಟಿ ಪಡಾವೋಅರಿವು ಕಾರ್ಯಕ್ರಮ ಸಹಿ ಅಭಿಯಾನ ಮತ್ತು ಪ್ರತಿಜ್ಞಾ ವಿಧಿ ಕಾರ್ಯಕ್ರಮ

ಬಾಗಲಕೋಟೆ ಜಿಲ್ಲೆಯ ಬಾದಾಮಿ ನಗರದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳ ಕಚೇರಿ ಬಾದಾಮಿ ಸಂಯೋಗದಿಂದ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯ 10ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಅರಿವು ಕಾರ್ಯಕ್ರಮ ಸಹಿ ಅಭಿಯಾನ ಮತ್ತು ಪ್ರತಿಜ್ಞಾ ವಿಧಿ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದ ಉದ್ಘಾಟನೆಯ ನಂತರ ಮಕ್ಕಳಿಂದ ಕೇಕ್ ಕಟ್ಟ ಮಾಡಿಸಿ ಸಿಹಿ ತಿನ್ನಿಸುವ ಮೂಲಕ ಕಾರ್ಯಕ್ರಮ ಮುಂದುವರೆಯಿತು. ಕಾರ್ಯಕ್ರಮದಲ್ಲಿ ಸಂಸದರಾದ ಶ್ರೀ ಪಿ.ಸಿ.ಗದ್ದಿಗೌಡರ್ ರವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಶಾಸಕರಾದ ಬಿ ಬಿ ಚಿಮ್ಮನಕಟ್ಟಿ, ಪುರಸಭೆ ಅಧ್ಯಕ್ಷರು, ತಾಲ್ಲೂಕಿನ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.



**ವರದಿ ನಿಂಬಯ್ಯ ಕುಲಕರ್ಣಿ, ಬಾದಾಮಿ**


ಕರುನಾಡ ಕಂದ
ಸಂಪುಟ 04 | ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ಶಿಥಿಲಾವಸ್ಥೆಯಲ್ಲಿರುವ ಸರಕಾರಿ ಶಾಲೆಯ ಕಟ್ಟಡ: ಆತಂಕದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಭೀಮಾ ನಗರದ ಸರಕಾರಿ ಶಾಲೆಯ ಮೇಲ್ಛಾವಣಿಯ ಮುಂದಿನ ಭಾಗವು ರಾತ್ರಿ ಕಡಿದು ಬಿದ್ದಿದ್ದು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಅನಾಹುತದಿಂದ ಪಾರಾಗಿದ್ದಾರೆ. ಈ ಶಾಲೆಯಲ್ಲಿ 120 ವಿದ್ಯಾರ್ಥಿಗಳು ಓದುತ್ತಿದ್ದು, ಈ ಶಾಲೆಯಲ್ಲಿ 6 ಕೋಣೆಗಳಿದ್ದರೂ ಅದರಲ್ಲಿ ಕೇವಲ 1 ಕೋಣೆ ಮಾತ್ರ ಉಪಯೋಗಿಸಲು ಯೋಗ್ಯವಾಗಿದೆ.

ಕಟ್ಟಡದ ಗೋಡೆಗಳು ಬಿರುಕು ಬಿಟ್ಟಿದ್ದು, ಶಾಲಾ ಕೋಣೆಗಳ ಮೇಲ್ಛಾವಣಿ ಅಲ್ಲಲ್ಲಿ ಕಡಿದು ಬಿದ್ದಿದ್ದು ಶಾಲೆ ಕಟ್ಟಡವು ಅತ್ಯಂತ ಶಿಥಿಲ ಸ್ಥಿತಿಯಲ್ಲಿದೆ, ಹಳೆಯ ಹಾಗೂ ದುರ್ಬಲವಾದ ಕಟ್ಟಡದಲ್ಲಿ ನೂರಾರು ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಮುಂದುವರೆಸುವಂತಾಗಿದೆ. ವಿದ್ಯಾರ್ಥಿಗಳು





ಮತ್ತು ಶಿಕ್ಷಕರು ಯಾವಾಗ ಕಟ್ಟಡ ಕುಸಿಯುತ್ತದೆಯೋ ಎಂಬ ಭಯದಲ್ಲಿ ಕಾಲ ಕಳೆಯುತ್ತಿದ್ದಾರೆ. ಮುಖ್ಯೋಪಾಧ್ಯಾಯರನ್ನು ವಿಚಾರಿಸಿದಾಗ ಈ ಸಮಸ್ಯೆಯನ್ನು ಬಗೆಹರಿಸಲು ಸಂಬಂಧ ಪಟ್ಟ ನಮ್ಮ ಇಲಾಖೆಯ ಮೇಲಾಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ ಎಂದು ಹೇಳಿದ್ದಾರೆ.

ಈ ಕುರಿತು ಊರಿನ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರಕಾರ ಮತ್ತು ಜನಪ್ರತಿನಿಧಿಗಳು ಈ ಸಮಸ್ಯೆಗೆ ಶೀಘ್ರ ಪರಿಹಾರ ಕಂಡುಕೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ವರದಿ ಮನೋಜ್ ನಿಂಬಾಳ

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಕುಂದು ಕೊರತೆ ಸಭೆ

**ವಿಜಯಪುರ:** ಬಸವನ ಬಾಗೇವಾಡಿ ಉಪವಿಭಾಗ ಪೊಲೀಸ್ ಠಾಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಕುಂದು ಕೊರತೆ ಸಭೆಯಲ್ಲಿ ಭಾರತೀಯ ಭೀಮ್ ಸೇನೆಯ ಜಿಲ್ಲಾ ಅಧ್ಯಕ್ಷರು ವಿಶ್ವನಾಥ ಚಲವಾದಿ ರವರು ಮಾತನಾಡಿ ತಾಳಿಕೋಟೆಯ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ನಾಗೂರ, ಹೊಸಳ್ಳಿ, ಶಳ್ಳಗಿ ಗ್ರಾಮದಲ್ಲಿ ಅಸ್ಪೃಶ್ಯತೆ ಎದ್ದು ತಾಂಡವ ಆಡುತ್ತಿದೆ ಆ ಊರಿನಲ್ಲಿ ದಲಿತ ಸಮುದಾಯದವರಿಗೆ ನೀರು ಎತ್ತಿ ಹಾಕುವುದು, ದಲಿತ ಸಮಾಜದಲ್ಲಿ ಯಾರಾದ್ರೂ ತೀರಿ ಹೋದರೆ ಅಂಗಡಿ ಹೋಟೆಲ್ ಗಳನ್ನು ಮುಚ್ಚುವುದು ಇದರಿಂದ ದಲಿತ ಸಮುದಾಯದ ಮುಂದಿನ ಪೀಳಿಗೆಗೆ ಬಹಳ ಪರಿಣಾಮ ಬೀರುತ್ತದೆ ಎಂದು ಮಾನ್ಯ ಡಿವೈ-ಎಸ್ಪಿ ಅವರಿಗೆ ಆ ಊರಿನ ಅಸ್ಪೃಶ್ಯತೆ ನಿವಾರಣೆ ಮಾಡಲು ಕಾನೂನು ಕ್ರಮ ಜರುಗಿಸಿ ನಾವೆಲ್ಲಾ ಒಂದೇ, ಮನುಷ್ಯರೇ ಎಂಬ ಮಾನವೀಯ ಮೌಲ್ಯದ ಪಾಠ ಹೇಳಿ ಕೊಡಿ ಎಂದು ಮನವಿ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಭಾರತೀಯ ಭೀಮ್ ಸೇನೆಯ ಜಿಲ್ಲಾ ಅಧ್ಯಕ್ಷ ವಿಶ್ವನಾಥ ಚಲವಾದಿ, ಉಪಾಧ್ಯಕ್ಷರು ಮತ್ತು ಸದಸ್ಯರು ಉಪಸ್ಥಿತರಿದ್ದರು.

**ವರದಿ : ಉಸ್ಮಾನ ಬಾಗವಾನ (ಬಳಗಾನೂರ)**




## ನರಸಾಪುರ ಗ್ರಾಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕದ ವತಿಯಿಂದ 76 ನೇ ಗಣರಾಜ್ಯೋತ್ಸವದ ದಿನಾಚರಣೆ





ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕು ನರಸಾಪುರ ಗ್ರಾಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕದ ವತಿಯಿಂದ 76 ನೇ ಗಣ-ರಾಜ್ಯೋತ್ಸವದ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕ.ರ.ವೇ. ಧ್ವಜಾರೋಹಣವನ್ನು ಶಂಕ್ರಪ್ಪ ಗಾಣಿಗೇರ ಇವರು ನೆರವೇರಿಸಿಕೊಟ್ಟರು.

ಈ ಸಂದರ್ಭದಲ್ಲಿ ಕರವೇ ಕಾರ್ಯಕರ್ತರು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯಕರ್ತರು ಹಾಗೂ ಸ.ಹಿ.ಪ್ರಾ.ಶಾಲಾ ಮಕ್ಕಳು, ಶಿಕ್ಷಕರು, ಆಶಾ ಕಾರ್ಯಕರ್ತೆಯರು ಮತ್ತು ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು ಕಾರ್ಯದರ್ಶಿ ಇನ್ನೂ ಮುಂತಾದ ಗಣ್ಯ ಮಾನ್ಯರು ಯುವಕರು ಮತ್ತು ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಊರಿನ ಗುರುಹಿರಿಯರು ಉಪಸ್ಥಿತರಿದ್ದರು.

ವರದಿ : ನಿಂಬಯ್ಯ ವಿ. ಕುಲಕರ್ಣಿ, ಬಾದಾಮಿ


### ಕರುನಾಡ ಕಂದ ಪತ್ರಿಕೆಯ ವಾರ್ಷಿಕ ಚಂದಾ ವಿವರ

ವಾರ್ಷಿಕ ಚಂದಾ =500/- ರೂಪಾಯಿಗಳು ಮಾತ್ರ (ಅಂಚೆ ವೆಚ್ಚ ಸೇರಿ)

ಫೋನ್ ಪೇ,ಗೂಗಲ್ ಪೇ ಅಥವಾ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿಸಿ ನಿಮ್ಮ ಸಂಪೂರ್ಣ ವಿಳಾಸವನ್ನು ವಾಟ್ಸ್ ಆಪ್ ಮಾಡಿ.

KARUNADA KANDA

-ಬಸವರಾಜ ಬಳಿಗಾರ, ಸಂಪಾದಕರು
9742776385



**"ಕರುನಾಡ ಕಂದ ಜನ ಜಾಗೃತಿ ವೇದಿಕೆ (ರಿ.)" ವತಿಯಿಂದ ರಾಜ್ಯಾದ್ಯಂತ "ಇಂದಿನ ಸದಸ್ಯರೇ ಮುಂದಿನ ನಮ್ಮ ಸಂಘಟನೆಯ ಪದಾಧಿಕಾರಿಗಳು" ಎಂಬ ಘೋಷ ವಾಕ್ಯದೊಂದಿಗೆ ಸದಸ್ಯತ್ವ ಅಭಿಯಾನ ಪ್ರಾರಂಭವಾಗಿದೆ. ಈಗಾಗಲೇ ಸಂಘಟನೆಗಳಲ್ಲಿ ಅನುಭವ ಇರುವ ಹಾಗೂ ಹೊಸದಾಗಿ "ಸಂಘಟನೆ ಸೇರಲು ಆಸಕ್ತಿ ಇರುವವರು ಮಾತ್ರ"ಸಂಪರ್ಕಿಸಿ.**



ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ:
ಬಸವರಾಜ ಬಳಿಗಾರ
ಸಂಸ್ಥಾಪಕ ರಾಜ್ಯಾಧ್ಯಕ್ಷರು,
"ಕರುನಾಡ ಕಂದ
ಜನ ಜಾಗೃತಿ ವೇದಿಕೆ (ರಿ.)"
9986366909
9513230273.

ಕರುನಾಡ ಕಂದ
ಜನ ಜಾಗೃತಿ ವೇದಿಕೆ (ರಿ.)
ನೋಂ.:DRKP/SOR/137/2024-2025
ಪ್ರಧಾನ ಕಚೇರಿ
ವಾರ್ಡ್ ಸಂಖ್ಯೆ 05,
ಕರ್ನಾಟಕ ಬ್ಯಾಂಕ್ ಹತ್ತಿರ,
ಇಂದಿರಾ ನಗರ, ಕುಷ್ಟಗಿ, ಜಿಲ್ಲೆ:
ಕೊಪ್ಪಳ ಪಿನ್: 583277
ಈಮೇಲ್ ಐಡಿ:
karunadakandajanajagrutivedike @gmail.com
www.karunadakanda.com

ಕರುನಾಡ ಕಂದ
ಸಂಪುಟ 04 | ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ಎಸ್. ಕೆ. ಬಿರಾದಾರ ಎರಡನೇ ಫ.ಗು ಹಳಕಟ್ಟಿ ಎಂದು ಬಿರುದು ಕೊಟ್ಟ ಷ. ಬ್ರ. ಡಾ. ಶಿವಾನಂದ ಶಿವಯೋಗಿಗಳು ದಾಸೋಹ ಮಠ ಸೊನ್ನ



ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದ ಆರಂಭದಲ್ಲಿ ಜೇವರ್ಗಿ ತಾಲ್ಲೂಕು ಕ.ಸಾ.ಪರಿಷತ್ ಅಧ್ಯಕ್ಷರಾದ ಶ್ರೀ ಎಸ್.ಕೆ.ಬಿರಾದಾರ ರವರು ಹಾಗೂ ನೆಲೋಗಿ ಗ್ರಾ.ಪಂ.ಅಧ್ಯಕ್ಷರಾದ ಶ್ರೀಮತಿ ತಾಯಮ್ಮ ಕಿರಣಗಿಯವರು ಧ್ವಜಾರೋಹಣ ನೆರವೇರಿಸಿದ ನಂತರ ಜೇವರ್ಗಿ ತಾಲೂಕಿನ ನೆಲೋಗಿ ಗ್ರಾಮದ ಶ್ರೇಷ್ಠ ವಚನಕಾರರಾದ ಶ್ರೀ ಕೋಲ ಶಾಂತಯ್ಯನವರ ವೇದಿಕೆ ಮತ್ತು ಶೃಂಗಾರಗೊಂಡ ವಿವಿಧ ಶರಣ – ಸಂತರ ಮಹಾದ್ವಾರಗಳ ಮೂಲಕ ಸಮ್ಮೇಳನಾ ಸರ್ವಾಧ್ಯಕ್ಷರಾದ ಪೂಜ್ಯ ಮ. ನಿ. ಪ್ರ. ಡಾ. ಶಿವಾನಂದ ಮಹಾ ಸ್ವಾಮಿಗಳು ದಾಸೋಹ ಮಠ ಸೊನ್ನ ಮತ್ತು ಪೂಜ್ಯ ಶ್ರೀ ಮ.ನಿ.ಪ್ರ.ಸಿದ್ದಲಿಂಗ ಮಹಾಸ್ವಾಮಿಗಳು ವಿರಕ್ತ ಮಠ ನೆಲೋಗಿಯವರ ಉಪಸ್ಥಿತರಾಗಿ ಸರಕಾರಿ ಪ್ರೌಢ ಶಾಲೆಯಿಂದ ಶ್ರೀ ಶರಣ ಕೋಲ ಶಾಂತಯ್ಯನವರ ವೇದಿಕೆಯವರೆಗೆ ಪೂಜ್ಯರು ವಿವಿಧ ರೀತಿಯ ಸಂಗೀತ ವಾದ್ಯಗಳ ಮೂಲಕ ವೇದಿಕೆಯನ್ನು ಪ್ರವೇಶಿಸಿದರು. ಈ ಮೆರವಣಿಗೆಯ ಉದ್ಘಾಟಕರಾಗಿ ಶ್ರೀ ಅಲ್ಲಮಪ್ರಭು ಪಾಟೀಲ್ ಶಾಸಕರು ಕಲಬುರಗಿ ದಕ್ಷಿಣ ಮತ ಕ್ಷೇತ್ರದವರು ಮಾಡಿದರು. ಮೆರವಣಿಗೆಯಲ್ಲಿ ಗೌರವ ಉಪಸ್ಥಿತರಾದ ಕ. ಸಾ. ಪ. ಗೌರವ ಅಧ್ಯಕ್ಷರಾದ ಶ್ರೀ ಚನ್ನಮಲ್ಲಯ್ಯ ಹಿರೇಮಠ, ಜೇವರ್ಗಿ ತಹಶೀಲ್ದಾರರಾದ ಶ್ರೀ ಮಲ್ಲಣ್ಣ ಯಲಗೋಡ್, ಸಂಗನಗೌಡ ಪಾಟೀಲ್ ಸಿ ಡಿ ಪಿ ಓ ಜೇವರ್ಗಿ, ರಾಜೇಸಾಬ್ ನದಾಫ್, ಶಂಬುಲಿಂಗ ದೇಸಾಯಿ, ಶರಣು ಬಿಲ್ಲಾಡ, ಮಲ್ಲಿಕಾರ್ಜುನ ಕಲ್ಲೂರ, ಸುರೇಶ ಹಿರೇಮಠ, ರವಿಚಂದ್ರ ಗುತ್ತೇದಾರ, ಮಲ್ಲಣ್ಣ ಬಂಗಾರಿ, ರವಿಕುಮಾರ ಕಿರಣಗಿ, ಸೋಮಶೇಖರ ಯರಗಲ್ಲ, ಮಲ್ಲಿಕಾರ್ಜುನ ಮಂಗಾ, ಬಂಗಾರೆಪ್ಪ ಆಡಿನ್ , ಬಸವರಾಜ ದಬಕಿ ಹಾಗೂ ನೂರಾರು ಶಾಲೆಯ ವಿದ್ಯಾರ್ಥಿ ಶಿಕ್ಷಕರ ಜತೆಗೆ ಕನ್ನಡಾಭಿಮಾನಿಗಳು ಗೌರವ ಉಪಸ್ಥಿತರಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಅಜಯ ಸಿಂಗ್ ಶಾಸಕರು ಜೇವರ್ಗಿ ಹಾಗೂ ಕೆ ಕೆ ಆರ್ ಡಿ ಬಿ ಅಧ್ಯಕ್ಷರು ಕಲಬುರಗಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಮ್ಮ ನೆಲೋಗಿ ಗ್ರಾಮದ ಮಣ್ಣಿನ ಸತ್ವವು ಬಹಳ ಸದೃಢವಾಗಿದೆ ಏಕೆಂದರೆ ನಮ್ಮ ಗ್ರಾಮದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೂ ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ತಾಕತ್ತಿದೆ ಅದೇ ರೀತಿಯಾಗಿ 12 ನೇ ಶತಮಾನದ ಶ್ರೇಷ್ಠ ವಚನಕಾರರಾದ ಶ್ರೀ ಕೋಲ ಶಾಂತಯ್ಯನವರು ನಮ್ಮೂರಿನವರೇ ಇರುವುದರಿಂದ ಅವರಿಗೆ 2.5 ಎಕರೆ ಭೂಮಿ ಈಗಾಗಲೆ ಮೀಸಲಿಟ್ಟಿದ್ದೇವೆ ಮುಂಬರುವ ದಿನಗಳಲ್ಲಿ ಕೋಲ ಶಾಂತಯ್ಯನವರ ಸ್ಮಾರಕ ಮತ್ತು ಇತರೆ ಮೂಲಭೂತವಾಗಿರುವ ಕಾರ್ಯಗಳನ್ನು ನಾನು ಮಾಡೇ ಮಾಡುತ್ತೇನೆಂದು ಸಮಸ್ತ ಕನ್ನಡಾಭಿಮಾನಿಗಳು ಹಾಗೂ



ಗ್ರಾಮಸ್ಥರ ಮುಂದೆ ಮಾತು ಕೊಟ್ಟರು.

ಕರ್ನಾಟಕ ಸುವರ್ಣ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕೇದಾರಲಿಂಗಯ್ಯ ಹಿರೇಮಠ ಜ್ಯೋತಿ ಬೆಳಗಿಸಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಕ.ಸಾ.ಪ ಜಿಲ್ಲಾಧ್ಯಕ್ಷರಾದ ಶ್ರೀ ವಿಜಯಕುಮಾರ ಪಾಟೀಲ್ ತೆಗಲ ತಿಪ್ಪಿಯವರು ಸಮ್ಮೇಳನದ ಸರ್ವಾಧ್ಯಕ್ಷರಾದ ಶ್ರೀ ಶಿವಾನಂದ ಶಿವಯೋಗಿಗಳು ಸೊನ್ನ ಪೂಜ್ಯರು ಆಯ್ಕೆಯಾಗಿದ್ದಕ್ಕೆ ಖುಷಿ ಆಯ್ತು ಜತೆಗೆ ಅಕ್ಷರ ಜೋಳಿಗೆಯನ್ನು ಹಿಡಿದು ಜ್ಞಾನ ದಾಸೋಹಿಗಳಾದರು ಇದು ಐತಿಹಾಸಿಕ ನೆಲ ನೆಲೋಗಿಯ ಶಕ್ತಿ ಹಾಗಿದೆ ಎಂದು ಆಶಯ ನುಡಿಗಳನ್ನು ಆಡಿದರು. ಇದೇ ಸಂದರ್ಭದಲ್ಲಿ ಶ್ರೀ ಶರಣಗೌಡ ಪಾಟೀಲ್ ಜೈನಾಪೂರವರ ಭಾವೈಕ್ಯತೆಯ ಬಿಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿರುವ ಷ.ಬ್ರ. ಡಾ. ಶಿವಾನಂದ ಮಹಾಸ್ವಾಮಿಗಳು ದಾಸೋಹ ಮಠ ಸೊನ್ನ ಹಾಗೂ ಷ.ಬ್ರ.ಶ್ರೀ ಡಾ. ಸಿದ್ದರಾಮ ಶಿವಾಚಾರ್ಯರು ತಪೋವನ ಮಠ ಶಹಾಪೂರ ವಹಿಸಿ ಸೊನ್ನ ಶ್ರೀಗಳು ಕನ್ನಡಾಭಿಮಾನಿಗಳು ಒಗ್ಗಟ್ಟಾಗಿ ಅತೀ ವಿಜೃಂಭಣೆಯಿಂದ ಮೆರವಣಿಗೆ ಮತ್ತು ವಿವಿಧ ಸಾಹಿತ್ಯದ ಕಾರ್ಯಕ್ರಮಗಳನ್ನು ಅದ್ಭುತವಾಗಿ ಆಯೋಜಿಸಿದ ನಿಮಗೂ ಮತ್ತು ಜೇವರ್ಗಿ ತಾಲೂಕಿನ ಕ.ಸಾ.ಪ ಅಧ್ಯಕ್ಷರಾದ ಎಸ್ ಕೆ ಬಿರಾದರವರಿಗೆ ಎರಡನೇ ಫ.ಗು ಹಳಕಟ್ಟಿ ಎಂದು ಹೇಳಬಹುದು ಎಂದು ಶ್ರೀಗಳು ಹೇಳಿದರು. ಮಾಜಿ ಶಾಸಕರಾದ ಶ್ರೀ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಶ್ರೀ ಧರ್ಮರಾಜ ಓ ಒಡೆಯರ್, ಡಾ. ಕೆ ಎಸ್ ನಾಯಕ ಬದನಿಹಾಳ ಹಾಗೂ ಉಪಸ್ಥಿತ–ರಿದ್ದರು ಇನ್ನೂ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ರಮೇಶ ಬಾಬು ವಕೀಲ, ರೇವಣಸಿದ್ದಪ್ಪ ಸಂಕಾಲಿ ಇದ್ದರು.

ಮಹಾಲಕ್ಷ್ಮಿ ಕಾಲೇಜ್ ಪ್ರಾಚಾರ್ಯರು/ಶಾಂತ ಸಿರಿ ಸ್ಮರಣ ಸಂಚಿಕೆಯ ಸಂಪಾದಕರಾದ ಶ್ರೀ ಧರ್ಮಣ್ಣ ಬಡಿಗೇರ್ ನಿರೂಪಣೆ ಮಾಡಿದರು, ಮಧುಸೂದನ ಚಿಂತಪನಳ್ಳಿಯವರು ಮುಂದಿನ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟು ಕಾರ್ಯಕ್ರಮಕ್ಕೆ ವಂದಿಸಿದರು.

ಕಾರ್ಯಕ್ರಮದ ಕೊನೆಯ ಘಟ್ಟವಾದ ಸಮಾರೋಪ ಹಾಗೂ ಸನ್ಮಾನ ಸಮಾರಂಭದ ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ ಪ. ಬ್ರ. ರುದ್ರಮುನಿ ಶಿವಾಚಾರ್ಯರು ಕಡೋಳರವರು ವಹಿಸಿಕೊಂಡಿದ್ದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳ ಸ್ವಾಗತವನ್ನು ಸುರೇಶ ಪಾಟೀಲ್ ನೇದಲಗಿಯವರು ಸ್ವಾಗತಿಸಿದರು. ಕಡಗಂಚಿಯ ಕೇಂದ್ರೀಯ ವಿಶ್ವ ವಿದ್ಯಾಲಯದ ಕುಲಸಚಿವರಾದ ಶ್ರೀ ಆರ್ ಆರ್ ಬಿರಾದಾರ ಅಧ್ಯಕ್ಷತೆಯನ್ನು ವಹಿಸಿದರು.

7 ನೇ ಸಾಹಿತ್ಯ ಸಮ್ಮೇಳನದ ನಿರ್ಣಯಗಳು ಮತ್ತು ಗೋಷ್ಠಿಯ ಉಪನ್ಯಾಸಗಳಾದ ಶರಣ ಕೋಲ ಶಾಂತಯ್ಯನವರ ಸ್ಮಾರಕ ನಿರ್ಮಾಣ ಮಾಡಬೇಕು, ಜೇವರ್ಗಿ ಭಾಗದ ಕೃಷಿ ಕ್ಷೇತ್ರಕ್ಕೆ ಉತ್ತೇಜನ ನೀಡಬೇಕು, ನಮ್ಮ ಭಾಗದ ಶರಣ ಸ್ಮಾರಕಗಳು ಬಸವ ಕಲ್ಯಾಣದ ಅಭಿವೃದ್ಧಿ ಮಂಡಳಿಗೆ ಸೇರಿಸಬೇಕು ಎಂದು ಶ್ರೀ ಕಲ್ಯಾಣ–ಕುಮಾರ ಸಂಗಾವಿ ಗಂವ್ಹಾರ ಗೌರವ ಕಾರ್ಯದರ್ಶಿಗಳು ತಾಲೂಕಾ ಕ.ಸಾ.ಪ ಜೇವರ್ಗಿಯವರು ನಿರ್ಣಯ ಮಂಡನೆ ಮಾಡಿದರು. ಶ್ರೀ ಹರಿ ಕರಕಿಹಳ್ಳಿ ಗೌರವ ಕಾ.ದರ್ಶಿಗಳು ಕ. ಸಾ. ಪ ಜೇವರ್ಗಿಯವರ ವಂದಿಸಿದರು.

**ವರದಿ ಚಂದ್ರಶೇಖರ ಪಾಟೀಲ್, ಗುಡೂರ ಎಸ್ ಎನ್**

# ಗಣಿತ ದಿನಾಚರಣೆ ಹಾಗೂ ಗಣಿತ ಕಲಿಕಾ ಮಾದರಿಗಳ ಪ್ರದರ್ಶನ ಕಾರ್ಯಕ್ರಮ

ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ವಜ್ರಬಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಣಿತ ದಿನಾಚರಣೆ ಹಾಗೂ ಗಣಿತ ಕಲಿಕಾ ಮಾದ–ರಿಗಳ ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿ–ತ್ತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸ್ವತಃ ತಯಾ–ರಿಸಿದ ವಿವಿಧ ರೀತಿಯ ಆಕರ್ಷಣೀಯ ಗಣಿತ ಕಲಿಕಾ ಮಾದರಿಗಳೊಂದಿಗೆ ಭಾಗವಹಿಸಿ ವಿಷಯ ವಿವರಣೆಯನ್ನು ಅತ್ಯಂತ ಉತ್ತಮವಾಗಿ ನೀಡಿದರು. ಕಾರ್ಯಕ್ರಮವನ್ನು ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಕುಮಾರಸ್ವಾಮಿಯವರು ಉದ್ಘಾಟಿಸುವುದರ ಮುಖಾಂತರ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿ ಶಾಲೆಯ ಎಲ್ಲಾ ತರಗತಿಗಳ ಮಕ್ಕಳು ಗಣಿತ ವಿಷಯದ ಕುರಿತು ಸಾಕಷ್ಟು ಮಾಹಿತಿಯನ್ನು ಪಡೆದರು ಶಾಲೆಯ ಎಲ್ಲಾ ಶಿಕ್ಷಕ ಬಳಗ ಈ ಕಾರ್ಯಕ್ರಮದಲ್ಲಿ ಅತ್ಯಂತ ಸಡಗರದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶಿಕ್ಷಕರಾದ ಶ್ರೀ ರಾಘವೇಂದ್ರ ಗೋನಾಳ ರವರು ಮಾತನಾಡಿ ಗಣಿತ ವಿಷಯವನ್ನು ಮಕ್ಕಳಿಗೆ ಸರಳವಾಗಿಸುವುದರ ಜೊತೆಗೆ ಮಕ್ಕಳು ತಾವೇ ತಯಾರಿಸಿದ ಮಾದರಿಗಳ ಕುರಿತು ವಿಷಯ



ವಿವರಣೆಯನ್ನು ನೀಡುವ ಕೌಶಲ್ಯವನ್ನು ಅವರಲ್ಲಿ ಬೆಳೆಸುವಲ್ಲಿ ಗಣಿತ ಶಿಕ್ಷಕಿಯರ ಶ್ರಮ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು. ಮುಖ್ಯಅತಿಥಿಗಳಾಗಿದ್ದ ಶ್ರೀ ಸಿದ್ದಪ್ಪ ಬಳಿಗಾರ ಗುರುಗಳು ಗಣಿತದ ವಿಭಿನ್ನ ವ್ಯಾಖ್ಯಾನಗಳನ್ನ ನಿರೂಪಿಸಿದರು ಹಾಗೂ ಗಣಿತ ಕಲಿಕೆಯ ಸರಳ ತಂತ್ರಗಳನ್ನು ವಿವ–ರಿಸಿದರು, ಮುಖ್ಯ ಶಿಕ್ಷಕರಾದ ಶ್ರೀ ಕುಮಾರಸ್ವಾಮಿಯವರು ಮಾತನಾಡಿ ಕಾರ್ಯಕ್ರಮದ ಮೂಲ ಕಾರಣೀಕರ್ತರಾದ ಗಣಿತ ಶಿಕ್ಷಕಿ ಕು. ಐಶ್ವರ್ಯ ಅಕ್ಕಸಾಲಿಗರವರ ಮಕ್ಕಳ ತಯಾರಿ ಕಾರ್ಯವನ್ನು ಪ್ರಶಂಶಿಸಿದರು ಹಾಗೂ ಇಂತಹ ಕಾರ್ಯಕ್ರಮಗಳು ಹೊಸತನದ ಕಲಿಕೆಗೆ ಸಹಾಯಕವಾಗುತ್ತವೆ



ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕು. ಐಶ್ವರ್ಯ ಅಕ್ಕಸಾಲಿಗರ್, ಕು. ಮಂಜುಳಾ ಪೂಜಾರ, ಶ್ರೀಮತಿ ಶಿಲ್ಪ ಬಂಡಿವಡ್ಡರ, ಕು.ನಾಗರಾಜ್ ಪವಾರ್, ಶ್ರೀಮತಿ ಈರಮ್ಮ ತಳವಾರ್, ಗ್ರಂಥಪಾಲಕರಾದ ಶ್ರೀ ರಂಗಪ್ಪ ಹಾಗೂ ಶ್ರೀಮತಿ ಶಿವಮ್ಮ ಪೊಲೀಸ್ ಪಾಟೀಲ್ ಭಾಗವಹಿಸಿದ್ದರು.

ಸಲ್ಮಾ ಬೇಗಮ್ ಕನಕಗಿರಿ ಪ್ರಾರ್ಥಿಸಿದರು, ಶ್ರೀ ನಿಂಗಪ್ಪ ಹಚ್ಚಪ್ಪನವರ್ ಸ್ವಾಗತಿಸಿದರು, ಶ್ರೀ ರಾಘವೇಂದ್ರ ಗೋನಾಳ್ ನಿರೂಪಿಸಿದರು ಶ್ರೀಮತಿ ತಾಹೇರಾ ಬೇಗಂ ವಂದಿಸಿದರು.

**ವರದಿ ಮೌನೇಶ ಎಚ್ ನಾಯಕ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ನೆನಪಿಂಗಳ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ ಹಾಗೂ ವಿದ್ಯಾರ್ಥಿಗಳಿಗೆ ವಿಶೇಷ ಸನ್ಮಾನ ಕಾರ್ಯಕ್ರಮ

**ನೆನಪಿಂಗಳ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ ಹಾಗೂ 2022-23ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಿಕ್ಷಕರಾಗಿ ನೇಮಕ ಹೊಂದಿದ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿಶೇಷ ಸನ್ಮಾನ ಕಾರ್ಯಕ್ರಮ.**

**ಬೀದರ್:** ಹೈ.ಕ.ಶಿ. ಸಂಸ್ಥೆಯ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ಬೀದರನಲ್ಲಿ ದಿ. 05-01-2025 ರಂದು ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ ಹಾಗೂ 2022-23ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಿಕ್ಷಕರಾಗಿ ನೇಮಕ ಹೊಂದಿದ ಮಹಾ ವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ಡಾ. ರಜಿನೀಶ್ ವಾಲಿ, ಆಡಳಿತ ಮಂಡಳಿ ಸದಸ್ಯರು, ಹೈ.ಕ.ಶಿ. ಸಂಸ್ಥೆ ಕಲಬುರಗಿ ಅವರು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ, ಜೀವನದಲ್ಲಿ ಯಶಸ್ಸು ಕಾಣಬೇಕಾದರೆ ವಿದ್ಯಾಭ್ಯಾಸವನ್ನು ಆಸಕ್ತಿಯಿಂದ ಕಲಿತಾಗ ಸಾಧನೆ ಗೈಯಲು ಸಾಧ್ಯವೆಂದು ಹೇಳಿದರು. ಶಿಕ್ಷಣ ರಂಗದಲ್ಲಿ ಶಿಕ್ಷಕ ವೃತ್ತಿಯು ಅತ್ಯಂತ ಪವಿತ್ರ ಹಾಗೂ ಶ್ರೇಷ್ಠವಾದುದು ಹಾಗೂ ಇಡೀ ಸಮಾಜ ಬದಲಾವಣೆ ಹಾಗೂ ನಿರ್ಮಾಣದ ಜವಾಬ್ದಾರಿಯು ಶಿಕ್ಷಕರ ಮೇಲಿರುವುದು ಅದನ್ನು ಸಮರ್ಥವಾಗಿ ನಿಭಾಯಿಸಬೇಕೆಂದು ಹೇಳಿದರು.

ಸಂಸ್ಥೆಯ ಶೈಕ್ಷಣಿಕ ವೃತ್ತಿಪರ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡುವ ವೃತ್ತಿಪರರ ಬಲವಾದ ಜಾಲವನ್ನು ರಚಿಸಲು ಸಂಘವು ಸೇತುವೆಯಾಗಿ ಕಾರ್ಯ ನಿರ್ವಹಿಸಬೇಕು, ವಿದ್ಯಾರ್ಥಿಗಳ ಸಂಘವು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ, ಸಂಸ್ಥೆಯನ್ನು ಬೆಂಬಲಿಸುವ ಗು-




ರಿಯನ್ನು ಹೊಂದಿ, ಜಾಗತಿಕ ಸಾಮಥ-ರ್ಯಗಳನ್ನು ಉತ್ತೇಜಿಸುತ್ತಾ ವಿದ್ಯಾರ್ಥಿಗಳಿಗೆ ವೃತ್ತಿ ಅವಕಾಶಗಳನ್ನು ವಿಸ್ತರಿಸಬೇಕು ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಭಾಲ್ಕಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸಿ.ಜಿ.ಹಳ್ಳದ ಅವರು ಮಾತನಾಡುತ್ತಾ ವ್ಯಕ್ತಿ ತನ್ನ ಜೀವನದಲ್ಲಿ ತಂದೆ-ತಾಯಿ, ಗುರು ಹಾಗೂ ಪೋಷಕರನ್ನು ಸದಾ ನೆನೆಯಬೇಕು ಅವ-ರಿಗೆ ಚಿರಋಣಿಯಾಗಿದ್ದು ಒಬ್ಬ ಸಮಥ-ರ್ವ ವ್ಯಕ್ತಿಯಾಗಿ ನಿರ್ಮಾಣವಾಗಬೇಕು ಎಂದು ಹೇಳಿದರು. ಮಹಾವಿದ್ಯಾಲಯದ ವಿದ್ಯಾರ್ಥಿಯೂ ಆಗಿದ್ದು, ಇಂದಿನ ಶಿಕ್ಷಕ-ರಿಗೆ ತಮ್ಮ ವೃತ್ತಿಯನ್ನು ಪ್ರಾಮಾಣಿಕವಾಗಿ, ನಿಷ್ಠೆಯಿಂದ ನಿಭಾಯಿಸಿಕೊಂಡು ಹೋಗಬೇಕು ಇಡೀ ಜಿಲ್ಲೆಯಲ್ಲಿಯೇ ಪ್ರತಿಷ್ಠಿತ ಶಿಕ್ಷಣವೆಂದರೆ ಅದು ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಸಮಾಜ-ಕ್ಕೆ ಸಮರ್ಥ ಶಿಕ್ಷಕರನ್ನು ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು. ವಿದ್ಯಾರ್ಥಿಗಳು ವ್ಯಕ್ತಿತ್ವ ವಿಕಾಸದ ಜೊತೆಗೆ ರಾಷ್ಟ್ರಾಭಿಮಾನ , ವೈಜ್ಞಾನಿಕ ಚಿಂತನೆ, ಸುಸ್ಥಿರ ಆರ್ಥಿಕ ಅಭಿವೃದ್ಧಿ ಹಾಗೂ ಸಮಾಜದಲ್ಲಿ ಜವಾಬ್ದಾರಿಯ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ನುಡಿದರು.

ಪ್ರಾಸ್ತಾವಿಕ ನುಡಿಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಚ. ಕನಕಟ್ಟೆ ಮಾತನಾಡುತ್ತಾ ಹಳೆಯ ವಿದ್ಯಾರ್ಥಿ ಸಂಘದ ಸ್ಥಾಪನೆ, ಸಂಘದ ಉದ್ದೇಶಗಳು ಮತ್ತು ಮಹತ್ವವನ್ನು ತಿಳಿ ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಶಂಭುಲಿಂಗ ವಾಲ್ದೊಡ್ಡಿ ಅಧ್ಯಕ್ಷತೆಯನ್ನು ವಹಿಸಿದರು, ಮುಖ್ಯ ಅತಿಥಿ ಸ್ಥಾನವನ್ನು ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀ ಇನಾಯತ ಸಿಂಧೆ, ಗೌರವ ಉಪಸ್ಥಿತಿಯನ್ನು ಶ್ರೀ ರೇವಣಪ್ಪ ಮೂಲಗೆ, ಬಿ.ವಿ.ಬಿ. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪಿ. ವಿಠ್ಠಲ ರೆಡ್ಡಿ ವಹಿಸಿದರು. ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಗಳ ಸಂಘದ ಸದಸ್ಯರಾದ ಸಾಗರ ಎಸ್. ಪಡಸಲೆ ಯವರು 2011-12ನೇಯ ವಿದ್ಯಾರ್ಥಿಯಾಗಿದ್ದು ಅವರು ಗೌರವಾಥ-ರ್ವಾಗಿ ಮಹಾವಿದ್ಯಾಲಯಕ್ಕೆ ಗೋಡೆ ಗಡಿಯಾರಗಳನ್ನು ಉಡುಗೊರೆಯಾಗಿ ನೀಡಿದರು.

ಪ್ರೌಢಶಾಲೆಯ ಶಿಕ್ಷಕರಾಗಿ ನೇಮಕ ಹೊಂದಿದೆ ಮಹಾವಿದ್ಯಾಲಯದ ಸುಮಾರು 52 ಸರ್ಕಾರಿ ಶಿಕ್ಷಕರಿಗೆ ವಿಶೇಷ ಸನ್ಮಾನ ಮಾಡಿದರು. ಕಾರ್ಯಕ್ರಮವನ್ನು ಉಪನ್ಯಾಸಕರಾದ ಶ್ರೀಮತಿ ವೀಣಾ ಜಲಾದಿ, ಸ್ವಾಗತವನ್ನು ಪಾಂಡುರಂಗ ಕುಂಬಾರ ಹಾಗೂ ವಂದನಾರ್ಪಣೆಯನ್ನು ಡಾ. ಸಂತೋಷಕುಮಾರ ಸಜ್ಜನ ನಡೆಸಿಕೊಟ್ಟರು.

**ವರದಿ : ಚಂದ್ರಕಾಂತ ಝುಬಾಡೆ**

# ಸಿಸಿ ಕ್ಯಾಮೆರಾಗಳನ್ನು ಅಳವಡಿಸಲು ಕಾಂಗ್ರೆಸ್ ಮುಖಂಡರಿಂದ ಮನವಿ

ಸಾರ್ವಜನಿಕರ ಸುರಕ್ಷತೆ ಹಿತದೃಷ್ಟಿಯಿಂದ ಚನ್ನರಾಯಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲು ಪುರಸಭೆ ಮುಖ್ಯ ಅಧಿಕಾರಿ ಯತೀಶ್ ಕುಮಾರ್ ಅವರಿಗೆ ಕಾಂಗ್ರೆಸ್ ಮುಖಂಡರಿಂದ ಮನವಿ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ಪಟ್ಟಣವು ಹಾಸನ ಜಿಲ್ಲೆಯ ಮಧ್ಯ ಭಾಗದಲ್ಲಿದ್ದು ವಾಣಿಜ್ಯ ವ್ಯವಹಾರಗಳ ಪ್ರಮುಖ ಕೇಂದ್ರವಾಗಿರುತ್ತದೆ. ಅಲ್ಲದೇ ಪಟ್ಟಣವು ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದ್ದು ಚನ್ನರಾಯಪಟ್ಟಣದಲ್ಲಿ ಪ್ರಮುಖ ಶಾಲಾ ಕಾಲೇಜುಗಳು ಇರುವುದರಿಂದ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ವಿಧ್ಯಾರ್ಥಿಗಳು ವಿದ್ಯಾಭ್ಯಾಸದ ಸಲುವಾಗಿ ಚನ್ನರಾಯಪಟ್ಟಣಕ್ಕೆ ಬಂದು ಹೋಗುತ್ತಿರುತ್ತಾರೆ. ಅಲ್ಲದೇ ರೈತರು ಬೆಳೆದ ತರಕಾರಿ, ದವಸ ದಾನ್ಯಗಳ ವ್ಯಾಪಾರಕ್ಕಾಗಿ ತಮ್ಮ ಜಮೀನುಗಳಿಗೆ ಅವಶ್ಯಕತೆ ಇರುವ ಪ್ರಮುಖ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ಚನ್ನರಾಯಪಟ್ಟಣಕ್ಕೆ ಬಂದು ಹೋಗುತ್ತಿರುತ್ತಾರೆ. ಚನ್ನರಾಯಪಟ್ಟಣದಲ್ಲಿ ಅತಿ ಹೆಚ್ಚು ವಾಣಿಜ್ಯ ಮಳಿಗೆಗಳಿದ್ದು, ವ್ಯಾಪಾರ ವಹಿವಾಟಿನಿಂದ ಪಟ್ಟಣದಲ್ಲಿ ಅತೀ ಹೆಚ್ಚು ಜನರು ಸೇರುತ್ತಾರೆ. ಯಾವುದೇ ಪ್ರಕರಣಗಳಾದಾಗ ಅತೀ ಶೀಘ್ರವಾಗಿ ಪತ್ತೆ ಹಚ್ಚಲು ಅನುಕೂಲವಾಗುವ ದೃಷ್ಟಿಯಿಂದ ಹಾಗೂ ಸಾರ್ವಜನಿಕರ ಸುರಕ್ಷತೆಯ ಹಿತದೃಷ್ಠಿಯಿಂದ ಚನ್ನರಾಯಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸುವ



ಅವಶ್ಯಕತೆ ಇರುವುದರಿಂದ ತಮ್ಮ ಪುರಸಭೆಯ ವತಿಯಿಂದ ಸಿ,ಸಿ ಕ್ಯಾಮೆರಾಗಳನ್ನು ಅಳವಡಿಸಲು ಕೋರಿದೆ.

ಈಗಾಗಲೇ ಸ್ಥಳೀಯ ಸಂಸ್ಥೆಗಳಿಗೆ ಪ್ರತಿ ವರ್ಷ ಸಾಕಷ್ಟು ಅನುದಾನ ಹಲವು ಯೋಜನೆಗಳಿಂದ ಬರುತ್ತಿದೆ. ಆ ಅನುದಾನವನ್ನು ಕೆಲವೊಮ್ಮೆ ಬಳಕೆ ಮಾಡದೆ ಇರುವುದ-ರಿಂದ ಅದು ಇಲ್ಲಿಯ ಸಾರ್ವಜನಿಕರಿಗೆ ಬಳಕೆಯಾಗದೆ ಸರ್ಕಾರಕ್ಕೆ ಹಿಂದಿರುಗುತ್ತಿದೆ. “ಆ” ಅನುದಾನವನ್ನು “ಈ” ಸಿ ಸಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಲು ಬಳಸಿಕೊಂಡರೆ ಸಾರ್ವಜನಿಕರಿಗೆ ಅನುಕೂಲ ಆಗುವುದರ ಜೊತೆಗೆ ಪೊಲೀಸರಿಗೆ ಕೆಲಸದ ಒತ್ತಡವು ಸಹ ಕಡಿಮೆ ಆಗುತ್ತದೆ. ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮಾನವ ಹಕ್ಕು ಆಯೋಗದ ಅಧ್ಯಕ್ಷರು ವರುಣ್ ಚಕ್ರವರ್ತಿ ಮತ್ತು ಸಾಮಾಜಿಕ ಹೋರಾಟಗಾರ ಮನೋಜ್ ನಾಯ್ಕ್, ಅಯೋಬ್ ಸಾಕಿಬ್ ಮತ್ತಿತರರು ಮನವಿ ಮಾಡಿದರು.


**– ಕರುನಾಡ ಕಂದ**



ಶ್ರೀ ರಾಜಕುಮಾರ್ ಮರತೂರಕರ್ ಗ್ರೇಡ್ 2 ತಹಶೀಲ್ದಾರರು ಚಿತ್ತಾಪುರ, ಜಿ.ಕಲಬುರಗಿ ಇವರು ಕರುನಾಡ ಕಂದ ಕ್ಯಾಲೆಂಡರ್ ಬಿಡುಗಡೆ ಮಾಡಿದ ಸಂದರ್ಭ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01–02–2025 ಪುಟಗಳು:16

# ಒಳ ಮೀಸಲಾತಿ ಜಾರಿಗಾಗಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ



**ಬೀದರ್:** ಭಾರತದ ಪ್ರಜಾಪ್ರಭುತ್ವದಲ್ಲಿ ಪರಮಪೂಜ್ಯ ಬಾಬಾಸಾಹೇಬ್ ಅಂಬೇಡ್ಕರ್ ರವರು ರಚಿಸಿದ ಸಂವಿಧಾನದ ಪೀಠಿಕೆಯಲ್ಲಿ ಎಲ್ಲರಿಗೂ ನ್ಯಾಯ ಸಿಗಬೇಕು ಎನ್ನುವ ಆಶಯವನ್ನು ಬರೆದಿದ್ದಾರೆ. ಅನುಷ್ಠಾನಕ್ಕಾಗಿ ಸಂವಿಧಾನದ 15.16ರ ಅನುಚ್ಛೇದದಲ್ಲಿ ಶೋಷಿತ ಸಮುದಾಯಗಳು ಸಮಾನವಾಗಿ ಬದುಕಲು ಮೀಸಲಾತಿ ಕಲ್ಪಿಸುವ ಮೂಲಭೂತ ಹಕ್ಕನ್ನು ನೀಡಿದ್ದಾರೆ. ಆದರೆ ಕರ್ನಾಟಕದಲ್ಲಿ ಚರ್ಮಗಾರಿಕೆಗೆ ಸಂಬಂಧಿಸಿದ ಮಾದಿಗ, ಸಮಗಾರ, ಡೋಹರ, ಮಚ್ಚಗಾರ ಮತ್ತು ಇತರೆ ಜಾತಿಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸಿಗದಿರುವ ಕಾರಣ ಇವರು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿದ್ದಾರೆ. ಈ ಅಸಮಾನತೆಯ ಸಂತ್ರಸ್ತರಾದ ಮಾದಿಗರು, ದಲಿತರು ಮತ್ತು ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ 30 ವರ್ಷಗಳ ತ್ಯಾಗ ಬಲಿದಾನದಿಂದ ಸಾವು ನೋವುಗಳನ್ನು ಅನುಭವಿಸಿ ನಿರಂತರವಾಗಿ ಹೋರಾಟ ಮಾಡಿದ ಪರಿಣಾಮದಿಂದಲೇ ಸರ್ವೋಚ್ಚ ನ್ಯಾಯಾಲಯವು ದಿನಾಂಕ 1.8.2024 ರಂದು 7 ಜನರ ನ್ಯಾಯಾಧೀಶರ ಸಂವಿಧಾನ ಪೀಠವು ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಒಳಮಿಸಲಾತಿ ನೀಡುವುದು ಸಂವಿಧಾನ ಬದ್ಧವಾಗಿ ರಾಜ್ಯ ಸರ್ಕಾರಗಳೇ ಎಂಪರಿಕಲ್ ಡಾಟಾ ದತ್ತಾಂಶವನ್ನು ಪಡೆದು ಒಳಮಿಸಲಾತಿ ವರ್ಗೀಕರಣವನ್ನು ಜಾರಿ ಮಾಡಬಹುದೆಂದು ಆದೇಶಿಸಿದೆ. ಸುಪ್ರೀಂಕೋರ್ಟಿನ ಆದೇಶವನ್ನು ಮರು ಪರಿಶೀಲಿಸಲು ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ವಜಾ ಮಾಡಿದೆ.

ಒಳ ಮೀಸಲಾತಿ ವರ್ಗೀಕರಣದ ಚಳುವಳಿಯನ್ನು ಅಂತಿಮ ಘಟ್ಟಕ್ಕೆ ತಲುಪಿಸಬೇಕಾಗಿರುವುದು ನಮ್ಮ ತಲೆಮಾರಿನ ಕರ್ತವ್ಯವಾಗಿದೆ. ಮಾದಿಗರ ಓಟ್ ಬ್ಯಾಂಕಿನಿಂದ ಅಧಿಕಾರಕ್ಕೆ ಬಂದು, ಮಾದಿಗರನ್ನೇ ನಿರ್ಲಕ್ಷಿಸುತ್ತಿರುವ ಕಾಂಗ್ರೆಸ್ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರಗಳು ತಮ್ಮ ಪ್ರಣಾಳಿಕೆಗಳಲ್ಲಿ ಒಳಮಿಸಲಾತಿ ಜಾರಿ ಮಾಡುತ್ತೇವೆ ಎಂದು ಘೋಷಿಸಿಕೊಂಡು ಅಧಿಕಾರಕ್ಕೆ ಬಂದಮೇಲೆ ವಿಳಂಬ ನೀತಿ ಅನುಸರಿಸುತ್ತಿರುವುದು ಎಷ್ಟು ಸರಿ? ನ್ಯಾಯದ ಅಸ್ಮಿತೆಯಾದ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಅಂಗೀಕರಿಸದೆ ಅಥವಾ ತಿರಸ್ಕರಿಸದೆ ಅತಂತ್ರ ಸ್ಥಿತಿಯಲ್ಲಿ ಒಳಮಿಸಲಾತಿ ವರ್ಗೀಕರಣವನ್ನು ಉದ್ದೇಶ ಪೂರಕವಾಗಿ ವಿಳಂಬ ಮಾಡುತ್ತಿರುವುದನ್ನು ಒಕ್ಕೂಟದ ವತಿಯಿಂದ ಖಂಡಿಸುತ್ತೇವೆ. ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾದ ಶೋಷಿತ ಸಮುದಾಯಗಳ ಸ್ಥಿತಿಗತಿಗೆ ಸಂಬಂಧಪಟ್ಟ ಮಾಹಿತಿಯ ದತ್ತಾಂಶಗಳನ್ನು ಮುಚ್ಚಿಡುವುದು ಈ ಸಮಾಜಕ್ಕೆ ಮಾಡುತ್ತಿರುವ ಘೋರ ಅನ್ಯಾಯವಾಗಿದೆ. ಸರ್ಕಾರವೇ 14 ಕೋಟಿ ಖರ್ಚು ಮಾಡಿ ದೇಶದಲ್ಲೇ ಮೊದಲ ಬಾರಿಗೆ ಸಂವಿಧಾನಾತ್ಮಕವಾಗಿ ಪರಿಶಿಷ್ಟ ಜಾತಿಗಳಲ್ಲಿ ಮೀಸಲಾತಿಯ ಸೌಲಭ್ಯಗಳ ಹಂಚಿಕೆಯಲ್ಲಾದ ತಾರತಮ್ಯವನ್ನು ವೈಜ್ಞಾನಿಕವಾಗಿ ಮನೆ ಮನೆಗೆ ಸಮೀಕ್ಷೆಯ ಮೂಲಕ ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ನ್ಯಾಯಮೂರ್ತಿ ಸದಾಶಿವರವರ ಆಯೋಗವು 2011ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ರಾಜ್ಯದ ಸಾರ್ವಜನಿಕ ಸೇವೆಗಳಲ್ಲಿ ಎಂ.ಪಿ, ಎಂಎಲ್ಎ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಸದಸ್ಯರ ಜಾತಿವಾರು ಜನಸಂಖ್ಯೆ ರಾಜಕೀಯ ಪ್ರಾಥಮಿಕದಲ್ಲಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಪ್ರವೇಶಾತಿಗಳಲ್ಲಿ ಪ್ರಾತಿನಿಧ್ಯದ ಕೊರತೆಯನ್ನು ದಾಖಲಿಸಿದ್ದಾರೆ, ಜೊತೆಗೆ ಪರಿಶಿಷ್ಟ ಜಾತಿಗಳಲ್ಲಿ ಎಷ್ಟೋ ಜನ ಗುಡಿಸಲು ವಾಸಿಗಳಾಗಿದ್ದಾರೆ, ಉನ್ನತ ಶಿಕ್ಷಣ ಪಡೆದಿದ್ದಾರೆ. ಶಿಕ್ಷಣವೇ ಪಡೆದುಕೊಳ್ಳಲಾಗದೆ ವಂಚಿತರಾಗಿದ್ದಾರೆ. ಭೂಮಿಯೇ ಇಲ್ಲದೇ ಕೂಲಿ ಕಾರ್ಮಿಕರಾಗಿದ್ದಾರೆ. ಅಕ್ರಮಗಳಿಗೆ ತುತ್ತಾಗಿ ಭೂಮಿ ಕಳೆದುಕೊಂಡಿದ್ದಾರೆ. ಎಷ್ಟು ಜನ ನಿವೇಶನಗಳೇ ಇಲ್ಲದೆ ವಸತಿ ಹೀನರಾಗಿದ್ದಾರೆ, ಜನಸಂಖ್ಯೆಗೆ ತಕ್ಕಂತೆ ಯಾವ ಸಮುದಾಯಗಳು ಎಷ್ಟು ನೌಕರಿ ಪಡೆದುಕೊಂಡಿದ್ದಾರೆ. ಸರ್ಕಾರದ ಯಾವ ಸೌಲಭ್ಯಗಳು ಸಿಗದೇ ವಂಚಿತರಾಗಿರುವವರನ್ನು ಸಮೀಕ್ಷೆಯ ಮೂಲಕ ಗುರುತಿಸಿ ವಿವಿಧ ಸಮುದಾಯಗಳ ಹಿಂದುಳಿದಿರುವಿಕೆಯನ್ನು ಮಾನದಂಡವಾಗಿಟ್ಟುಕೊಂಡು ಗುರುತಿಸಲಾದ ತರ್ಕಬದ್ಧ ದತ್ತಾಂಶಗಳ ಆಧಾರದ ಮೇಲೆ 101 ಪರಿಶಿಷ್ಟ ಜಾತಿಗಳನ್ನು ಗುಂಪುಗಳಾಗಿ ವಿಂಗಡಿಸಿ ಜಾತಿ ಉಪಜಾತಿಗಳಿಗೆ ಸೂಕ್ತವಾದ 4 ಒಳ ಮೀಸಲಾತಿಯನ್ನು ನೀಡಲು ಶಿಫಾರಸ್ಸು ಮಾಡಿದ್ದಾರೆ. ಗ್ರೂಪ್ 1 ರಲ್ಲಿ ಮಾದಿಗ ಮತ್ತು ಸಂಬಂಧಿತ ಸಮುದಾಯಗಳಿಗೆ ಶೇ.6 ರಷ್ಟು ಗ್ರೂಪ್ 2 ರಲ್ಲಿ ಹೊಲೆಯರು ಮತ್ತು ಸಂಬಂಧಿತ ಸಮುದಾಯಗಳಿಗೆ ಶೇ.5 ರಷ್ಟು, ಗ್ರೂಪ್ 3 ರಲ್ಲಿ ಭೋವಿ, ಲಂಬಾಣಿ, ಕೊರಮ, ಕೊರಚ ಸಮುದಾಯಗಳಿಗೆ ಶೇ.3 ರಷ್ಟು ಹಾಗೂ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾದ ಅಲೆಮಾರಿಗಳಿಗೆ ಶೇ.1 ರಷ್ಟು ಒಳ ಮೀಸಲಾತಿ ವರ್ಗೀಕರಣಕ್ಕಾಗಿ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ದಿನಾಂಕ: 06.06.2012 ರಂದು ವರದಿಯನ್ನು ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ಸದಾಶಿವ ಆಯೋಗವು ಆದಿಕರ್ನಾಟಕ, ಆದಿದ್ರಾವಿಡ ಮತ್ತು ಆದಿಆಂಧ್ರ ಎಂಬ ಜಾತಿಗಳ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಎಡಗೈ ಮತ್ತು ಬಲಗೈ ಸಮುದಾಯದ ಸಂಬಂಧಿತ ಉಪ ಸಮುದಾಯಗಳನ್ನು ಸರಿಯಾಗಿ ಗುರುತಿಸಿ ಯಾವುದೇ ಸಂಶಯಗಳು ಮತ್ತು ಗೊಂದಲಗಳು ಇಲ್ಲದೆ ವರದಿಯನ್ನು ನೀಡಿದ್ದಾರೆ. ಆದರೆ ನೀವು ವಿಳಂಬ ಮಾಡಿದ ನಮಗೆ ಸರಿ ಅನಿಸ್ತಾ ಇಲ್ಲ ಮುಂದಿನ ದಿನಗಳಲ್ಲಿ ನಾವು ತುಂಬಾ ಉಗ್ರ ಹೋರಾಟ ಮಾಡುತ್ತೇವೆ ಎಂದು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗೆ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ದಲಿತ ಸಂಘಟನೆ ಮುಖಂಡರು ಹಾಗೂ ಮಾದಿಗ ಸಂಘಟನೆ ಮುಖಂಡರು ಮತ್ತು ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಉಪಾಧ್ಯಕ್ಷರಾದ ದತ್ತು ಸೂರ್ಯವಂಶಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ್ ಕೋಟೆ, ರಾಜ್ಯ ಕಾರ್ಯದರ್ಶಿ ಜಿ.ಆಸ್ಕರ್ , ಸತ್ಯದೀಪ ರಾಜ್ಯ ಪ್ರಧಾನ ಕಾರ್ಯದರ್ಶಿಗಳು , ಜಿಲ್ಲಾಧ್ಯಕ್ಷರಾದ ಯೊಹಾನ್ ಡಿಸೋಜಾ ಚಿಲ್ಲರ್ಗಿ, ಗುಣವಂತ ಶಿಂಧೆ ಜಿಲ್ಲಾ ಉಪಾಧ್ಯಕ್ಷರು, ಶಿವರಾಜ್ ಮಾದಿಗ ಉಪಾಧ್ಯಕ್ಷರು, ದತ್ತು ಭಂಡಾರಿ ಜಿಲ್ಲಾ ಸಂಯೋಜಕರು, ಲಾಲಪ್ಪ ನಿರ್ಣ ಮಾದಿಗ ಅಧ್ಯಕ್ಷರು ಸೇರಿದಂತೆ ಹಾಗೂ ಇನ್ನಿತರು ಉಪಸ್ಥಿತರಿದ್ದರು.

**ವರದಿ ರೋಹನ್ ವಾಘಮಾರೆ**

## ಕರ್ನಾಟಕ ರಕ್ಷಣಾ ವೇದಿಕೆ (ಸ್ವತಂತ್ರ ಬಣದ) ಯಲಬುರ್ಗಾ ತಾಲೂಕು ಅಧ್ಯಕ್ಷರಾಗಿ ಶಂಕ್ರಪ್ಪ ಶಾಖಾಪುರ ಆಯ್ಕೆ

ಕೊಪ್ಪಳ ಯಲಬುರ್ಗಾ ತಾಲೂಕಿನ ಸಾಲಭಾವಿ ಗ್ರಾಮದ ಶ್ರೀ ಶಂಕ್ರಪ್ಪ ಶಾಖಾಪುರ ಅವರ ಸಾಮಾಜಿಕ ಸೇವೆ ಪರಿಗಣಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವತಂತ್ರ ಬಣದ ಯಲಬುರ್ಗಾ ತಾಲೂಕು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವತಂತ್ರ ಬಣದ ಯುವ ಘಟಕದ ರಾಜ್ಯ ಅಧ್ಯಕ್ಷರು ಶಶಿಧರ ನಾಯಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವರದಿ ಮೌನೇಶ ಎಚ್. ನಾಯಕ**





ಶ್ರೀ ಎಚ್. ಎನ್. ಶಿರಹಟ್ಟಿ ಬೈಲಹೊಂಗಲ ತಾಲೂಕಾ ಗ್ರೇಡ್ 1 ತಹಶೀಲ್ದಾರ ಅವರು ಕರುನಾಡ ಕಂದ ಕ್ಯಾಲೆಂಡರ್ ಬಿಡುಗಡೆಗೊಳಿಸುತ್ತಿರುವ ಸಂದರ್ಭ.



ಶ್ರೀಮತಿ ಪಂಕಜ ಮುಖ್ಯಾಧಿಕಾರಿಗಳು ಗ್ರೇಡ್ -1 ತಾಲೂಕ ಪಟ್ಟಣ ಪಂಚಾಯತ್ ಕಾಳಗಿ, ಕಲಬುರ್ಗಿ ಜಿಲ್ಲೆ ಇವರಿಗೆ ಕರುನಾಡ ಕಂದ ಹೊಸ ವರ್ಷದ ಕ್ಯಾಲೆಂಡರ್ ನೀಡಿದ ಸಂದರ್ಭ



ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನ ಕೋಡ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಶ್ರೀ ದೇವೇಂದ್ರಪ್ಪ ಇವರು ಕರುನಾಡ ಕಂದ ಕ್ಯಾಲೆಂಡರ್ ಬಿಡುಗಡೆ ಮಾಡಿದ ಸಂದರ್ಭ.

ಕರುನಾಡ ಕಂದ
ಸಂಪುಟ 04 | ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ವಿಜ್ಞಾನಿಗಳಾಗಲು ಆಸಕ್ತಿ ತೋರಿ: ವಿಜ್ಞಾನಿ ಡಿ.ಆರ್.ಡಿ.ಓ. ಪುಣೆ ಸುಬೋಧಕುಮಾರ ನಾಯಕ್ ಸಲಹೆ





**ಬೀದರ್:** ಭಾಲ್ಕಿ ತಾಲೂಕಿನ ಪಂಚಶೀಲ ಶಿಕ್ಷಣ ಸಂಸ್ಥೆಯ ಕೇಸರ್ ಜವಳಗಾ ಗ್ರಾಮದ ಸಂಗಮೇಶ್ವರ ಪ್ರೌಢ ಶಾಲೆಯಲ್ಲಿ ದಿ. 29-1-2025 ರಂದು ಬೆಂಗಳೂರಿನ ಡಿಆರ್‌ಡಿಒ ದ ಪ್ರತಿಷ್ಠಿತ ವಿಜ್ಞಾನಿ ಮತ್ತು ಅದೇ ಶಿಕ್ಷಣ ಸಂಸ್ಥೆಯ ಹೆಮ್ಮೆಯ ಹಳೆಯ ವಿದ್ಯಾರ್ಥಿನಿಯಾದ ಗೌರವಾನ್ವಿತ ವಿದ್ಯಾವತಿ ಎಸ್. ಠಾಕೂರ್ ನಾಯಕ್ ಜೊತೆಗೆ ಡಿಆರ್‌ಡಿಓ ಪುಣೆಯ ಪ್ರಖ್ಯಾತ ವಿಜ್ಞಾನಿ ಮತ್ತು ನಿರ್ದೇಶಕರು ಸುಬೊಧ ಕುಮಾರ್ ನಾಯಕ್ ಅವರು ಸಂಗಮೇಶ್ವರ್ ಪ್ರೌಢ ಶಾಲೆಗೆ ಭೇಟಿ ನೀಡಿದ್ದು ಅವರ ಈ ಒಂದು ಭೇಟಿಯು ಶಾಲೆಯ ಸಮುದಾಯಕ್ಕೆ ಗಮನಾರ್ಹ ಸುಸಂದರ್ಭ ಮತ್ತು ಸ್ಪೂರ್ತಿಯನ್ನು ನೀಡಿತು ಶಾಲೆಯ ಮುಖ್ಯ ಗುರುಗಳಾದ ಸತೀಶ ಗುಂಜರ್ಗೆ ಅವರು ಗೌರವಪೂರ್ವಕವಾಗಿ ವಿಜ್ಞಾನಿಗಳನ್ನು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಗೌರವಾನ್ವಿತ ವಿಜ್ಞಾನಿಗಳಾದ ಶ್ರೀಮತಿ ವಿದ್ಯಾವತಿ ಎಸ್. ಠಾಕುರ್ ನಾಯಕ ಅವರು ತಮ್ಮ ಶಾಲಾ ದಿನಗಳ ನೆನಪುಗಳನ್ನು ಮತ್ತು ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಮತ್ತು ಶಿಕ್ಷಕರೊಂದಿಗೆ ಹಂಚಿಕೊಂಡರು. ಜೊತೆಗೆ ಪ್ರತಿ ಮಗು ತನ್ನದೆಯಾದ ಕೌಶಲ ಮತ್ತು ಬುದ್ಧಿ ಶಕ್ತಿ ಹೊಂದಿದ್ದು ಶಿಕ್ಷಕರು ಗುರುತಿಸಿ ಶೈಕ್ಷಣಿಕ ಚಟುವಟಿಕೆಗೆ ಪ್ರೋತ್ಸಾಹಿಸಿದರೆ ಮಗುವಿನ ಶೈಕ್ಷಣಿಕ ಗುಣಮಟ್ಟ ವೃದ್ಧಿಸುತ್ತದೆ ಎಂದು ಹೇಳಿದರು.

ನಂತರದಲ್ಲಿ ಮಾತನಾಡಿದ ಗೌರವಾನ್ವಿತ ವಿಜ್ಞಾನಿಗಳಾದ ಶ್ರೀ ಸುಬೊಧಕುಮಾರ ನಾಯಕ ಅವರು ಶಾಲೆಯಲ್ಲಿನ ಶಿಕ್ಷಕ ಸಮೂಹ ಮಕ್ಕಳ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆ ಗುಣಮಟ್ಟದಿಂದ ಕೂಡಿದೆ ಎಂದರು.

ಭವಿಷ್ಯದ ವಿಜ್ಞಾನಿಗಳನ್ನು ರೂಪುಗೊಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಮೂಲ ವಿಜ್ಞಾನ, ವಿಜ್ಞಾನ ಹಾಗೂ ಸಂಶೋಧನೆಯಲ್ಲಿ ತೊಡಗಲು ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಿದೆ ಎಂದರು.

ಭಾರತದಲ್ಲಿ ವಿಜ್ಞಾನಿಗಳಾಗಿ ಮುಂದೆ ಬರುವವರ ಸಂಖ್ಯೆ ಅತ್ಯಂತ ಕಡಿಮೆ ಇದೆ. ಸುಮಾರು 120 ಕೋಟಿ ಜನಸಂಖ್ಯೆ ಹೊಂದಿರುವ ಈ ದೇಶದಲ್ಲಿ ವಿಜ್ಞಾನಿಗಳಾಗುವವರ ಸಂಖ್ಯೆ ಕೇವಲ ಶೇ. 1.5 ರಷ್ಟು ಮಾತ್ರ ಇದೆ. ಆದರೆ, ಅಮೆರಿಕಾದಲ್ಲಿ ಇದರ ಪ್ರಮಾಣ ಶೇ.58ರಷ್ಟು, ಜಪಾನಿನಲ್ಲಿ ಶೇ.48 ಹಾಗೂ ಚೀನಾದಲ್ಲಿ ಶೇ.42ರಷ್ಟು ವಿಜ್ಞಾನಿಗಳಿದ್ದಾರೆ. ಇಂತಹ ಬದಲಾವಣೆಯನ್ನು ನಮ್ಮಲ್ಲಿಯೂ ಕಾಣಬೇಕಾಗಿದೆ ಎಂದು ಅವರು ತಿಳಿಸಿದರು.

ನಂತರ ಮಕ್ಕಳೊಂದಿಗೆ ಸಂವಾದ ನಡೆಸಿದ ಮಕ್ಕಳ ಎಲ್ಲಾ ಪ್ರಶ್ನೆಗೂ ಮನವರಿಕೆಯಾಗುವಂತೆ ಉತ್ತರಿಸುವ ಮೂಲಕ ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಕಾರಣರಾದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಶ್ರೀ ಭೀಮ ಎಳ್ನುರೆ, ಶ್ರೀ ಸಂಜೀವಕುಮಾರ ಖೊಬ್ಬರಗಡೆ, ಶ್ರೀ ರತ್ನಮ್ಮಾ ಪರಷೆಣೆ, ಶ್ರೀ ಪ್ರಭಾವತಿ ರೊಟ್ಟೆ, ಶ್ರೀ ಸಾಯಿನಾಥ್ ಗೊರೆ, ಶ್ರೀ ಮಹೇಶ್ ನವಾಡೇ, ಶ್ರೀಮತಿ ಅಶ್ವಿನಿ ಕರಕಲ್ಲೆ, ಶ್ರೀಕಾಂತ್ ಖೇಳಗೆ, ಮಹದೇವ್ ವಾಗೆ, ಶ್ರೀ ವಿಮಲ್ ಸೂರ್ಯವಂಶಿ, ಶ್ರೀ ಪ್ರಭುರಾವ್ ಮಂಗಣೆ, ಶ್ರೀ ಮಾಧವರಾವ್ ತಾಂಬೋಲೇ, ಶ್ರೀ ಬಾಬುರಾವ್ ಕರಕಲ್ಲೆ, ಶ್ರೀ ಚಂದ್ರಪ್ಪ ಕರಕಲೆ, ಶ್ರೀ ಮಾರುತಿ ಸಗರ್, ಶ್ರೀ ರಮೇಶ ಕಾಣೆಕರ್, ವಿಜಯ ಲಕ್ಷ್ಮಿ ಪೂಜಾರಿ, ಶ್ರೀ ಧರ್ಮವೀರ್ ಪಾಟೀಲ್, ಶ್ರೀ ಪಂಡಿತ್ ಕೋಳಿಕರ್, ಶ್ರೀ ದತ್ತಾತ್ರಿ, ಶ್ರೀ ಇಂದ್ರಜಿತ್ ಗುಪ್ತ, ಶ್ರೀ ಉತ್ತಮ ವಾಗೆ, ಶ್ರೀ ಶ್ರೀಧರ್ ಪಿಎಸ್ಐ, ಶ್ರೀ ದಿಲೀಪ್ ಗಂಟೆ, ಶ್ರೀ ರಮೇಶ್ ಧೋಲಿ ಇತರರು ಉಪಸ್ಥಿತರಿದ್ದರು.

**ವರದಿ: ಸಾಗರ್ ಪಡಸಲೆ**

# ಸಮುದಾಯದ ಜಾಗೃತಿಗೆ ವಾಲ್ಮೀಕಿ ಜಾತ್ರೆಯಲ್ಲಿ ಭಾಗವಹಿಸಲು ಪ್ರಸನ್ನಾನಂದ ಪುರಿ ಸ್ವಾಮೀಜಿ ಕರೆ



**ಕೊಪ್ಪಳ/ ಯಲಬುರ್ಗಾ:** 'ನೂರಾರು ವರ್ಷಗಳಿಂದ ಶೋಷಣೆಗೊಳಗಾಗಿರುವ ಸಮುದಾಯಗಳ ಜಾಗೃತಿಗಾಗಿ ವಾಲ್ಮೀಕಿ ಜಾತ್ರೆ ಹಮ್ಮಿಕೊಳ್ಳಲಾಗಿದೆ. ಇದು ಸಾಂಪ್ರದಾಯಿಕ ಜಾತ್ರೆಯಾಗಿರದೆ ಸಮುದಾಯದ ಜನರ ಜಾಗೃತಿಗಾಗಿ ನಡೆಯುತ್ತಿರುವ ವೈಚಾರಿಕ ಜಾತ್ರೆ ಇದಾಗಿದೆ ಎಂದು ವಾಲ್ಮೀಕಿ ಗುರುಪೀಠದ ಜಗದ್ಗುರು ಪ್ರಸನ್ನಾನಂದ ಪುರಿ ಮಹಾ ಸ್ವಾಮೀಜಿ ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಇತ್ತೀಚಿಗೆ ಹಮ್ಮಿಕೊಂಡಿದ್ದ 7ನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರೆಯ ಫೆ. 8 ಮತ್ತು 9 ರ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಮಠದ 27 ನೇ ವರ್ಷದ ವಾರ್ಷಿಕೋತ್ಸವ ಲಿಂಗೈಕ್ಯ ಪುಣ್ಯಾನಂದಪುರಿ ಮಹಾಸ್ವಾಮಿಯ 18 ನೇ ವರ್ಷದ ಪುಣ್ಯಾರಾಧನೆ ಜಗದ್ಗುರು ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿ ರವರ 17ಮಹಾಸ್ವಾಮಿಯ ಪಟ್ಟಾಧಿಕಾರ ಮಹೋತ್ಸವ ಹಾಗೂ ವೈಚಾರಿಕ ಜಾತ್ರೆಯ ಆಶಯಗಳನ್ನು ಜನರಿಗೆ ತಿಳಿಸಲು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಭೇಟಿ ನೀಡಿ ಜಾತ್ರೆಗೆ ಕರೆಯುತ್ತಿದ್ದೇನೆ' ಎಂದರು.

'ನಮ್ಮ ಸಹೋದರ ಸಮುದಾಯಗಳು ಈಗಲೂ ಶೋಚನೀಯ ಸ್ಥಿತಿಯಲ್ಲಿವೆ. ಅವರನ್ನೂ ಸಹ ನಮ್ಮೊಂದಿಗೆ ಕರೆದೊಯ್ಯಬೇಕಿದೆ. 'ಜಾತಿ ಕಾರಣಕ್ಕಾಗಿ ಊರಾಚೆ ಇಡಲಾಗಿದ್ದ ನಮ್ಮ ಸಮುದಾಯಗಳನ್ನು ಗುರುತಿಸಿದ ಅಂಬೇಡ್ಕರ್, ನಮ್ಮ ಅಭಿವೃದ್ಧಿಗೆ ವಿಶೇಷ ಸೌಲಭ್ಯಗಳನ್ನು ಕೊಟ್ಟರು. ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಿ ಮಾತ್ರ ನಮ್ಮನ್ನು ನೆನಪಿಸಿಕೊಳ್ಳುತ್ತಾರೆ. ಉಳಿದಂತೆ ಕಡೆಗಣಿಸುತ್ತಾರೆ. ಹಣ ಮತ್ತು ಹೆಂಡ ಕೊಟ್ಟರೆ ಮತ ಹಾಕುತ್ತಾರೆ ಎಂಬ ಮನಸ್ಥಿತಿ ಅವರದ್ದು. ಇದೇ ಕಾರಣಕ್ಕೆ ಜಾತಿ ಹೆಸರಿನಲ್ಲಿ ಮೋಸ ಮಾಡುವ ರಾಜಕೀಯ ಪಕ್ಷಗಳು, ನಮ್ಮವರಿಂದಲೇ ನಮ್ಮನ್ನು ತುಳಿಯುವ ಕೆಲಸ ಮಾಡುತ್ತಾರೆ ಈ ಬಗ್ಗೆ ಎಚ್ಚರಿಕೆ ಅಗತ್ಯ' ಎಂದು ತಿಳಿಸಿದರು ಆದ್ದರಿಂದ ನಮ್ಮ ಸಮುದಾಯ ಸಂಘಟಿತರಾಗಬೇಕು ಬೇಕು ಇಲ್ಲವಾದರೆ ನಾವೂ ತುಳಿತಕ್ಕೆ ಒಳಗಾಗುವದು ಖಚಿತ ಆದ್ದರಿಂದ ತಪ್ಪದೆ ಎಲ್ಲರು ವೈಚಾರಿಕ ಜಾತ್ರೆಗೆ ಆಗಮಿಸಿ ಯಶಸ್ವಿಗೊಳಿಸಲು ಮುಂದಾಗಿ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಜಾತ್ರಾ ಮಹೋತ್ಸವದ ತಾಲೂಕ ಸಮಿತಿ ಅಧ್ಯಕ್ಷರನ್ನಾಗಿ ಫಕೀರಪ್ಪ ತಳವಾರ ರವರನ್ನು ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ವಾಲ್ಮೀಕಿ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಕೆ.ಎನ್.ಪಾಟೀಲ್, ತಾಲೂಕ ಅಧ್ಯಕ್ಷ ಮಾನಪ್ಪ ಪೂಜಾರ, ಮುಖಂಡರುಗಳಾದ ಟಿ. ರತ್ನಾಕರ, ರಾಮಣ್ಣ ತಳವಾರ, ಕಾರ್ಯದರ್ಶಿ ಚನ್ನ ಬಸವ ಕುಲಕರ್ಣಿ, ಉಪಾಧ್ಯಕ್ಷರ ಹಂಚಾಳಪ್ಪ ಪೂಜಾರ, ಹನುಮಂತಪ್ಪ ತಳವಾರ, ಹನುಮಗೌಡ ಗಾಣಧಾಳ, ದ್ಯಾಮಪ್ಪಗೌಡ್ರ ಚನ್ನಬಸವ ಗುಮಗೇರಿ, ಕಳಕಪ್ಪ ತಳವಾರ ಶರಣಪ್ಪ ಹುಣಶಿಹಾಳ, ಕಳಕಪ್ಪ ಹಿರೇಮ್ಯಾಗೇರಿ, ಗುಂಡನಗೌಡ ಸಾಲಭಾವಿ, ಶಶಿಧರ ನಾಯಕ, ಶಂಕ್ರಪ್ಪ ಶಾಖಾಪುರ, ಮೌನೇಶ ಎಚ್ ವಜ್ರಬಂಡಿ, ಶರಣಪ್ಪ ವಜ್ರಬಂಡಿ, ಭೀಮನಗೌಡ ಮಾಲಿ ಪಾಟೀಲ್, ಶರಣಪ್ಪ ಶ್ಯಾಡ್ಲಿಗೇರಿ, ದುರಗಪ್ಪ ತಳವಾರ, ರಾಮಣ್ಣ ಪೂಜಾರ, ಶಂಕ್ರಪ್ಪ ತಳವಾರ, ಶರಣಗೌಡ ಮಾಟಲದಿನ್ನಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

**ವರದಿ ಮೌನೇಶ ಎಚ್ ನಾಯಕ**



ಶ್ರೀ ಮಂಜನಾಥ ವಾಯ್. ಕರಿಸಿರಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ. ಬೈಲಹೊಂಗಲ ತಾಲೂಕಿನ ವಿಸ್ತರಣಾಧಿಕಾರಿಗಳು ಕರುನಾಡ ಕಂದ ಕ್ಯಾಲೆಂಡರ್ ಬಿಡುಗಡೆಗೊಳಿಸಿದ ಸಂದರ್ಭ.





ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಇಲಕಲ್ಲ, ಜಿಲ್ಲೆ : ಬಾಗಲಕೋಟೆ

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01–02–2025 ಪುಟಗಳು:16

# ಮುಂಡಗೋಡದ ಕಾರ್ಮಿಕ ಸಮುದಾಯ ಭವನ ಇನ್ನಷ್ಟು ಜನೋಪಯೋಗಿಯಾಗಲಿ




**ಉತ್ತರ ಕನ್ನಡ:** ಯಲ್ಲಾಪುರ – ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಶಿವರಾಮ್ ಹೆಬ್ಬಾರ್ ಅವರು ಕಾರ್ಮಿಕ ಸಚಿವರಾಗಿದ್ದ ವೇಳೆ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಮುಂಡಗೋಡ ನಗರದ ಹೊರಭಾಗ ಹೆಬ್ಬಾರ್ ನಗರದಲ್ಲಿ ಸುಮಾರು ಎರಡು ಎಕರೆ ವ್ಯಾಪ್ತಿಯಲ್ಲಿ ವಿಶೇಷ ಕಾಳಜಿ ವಹಿಸಿ ಜಿಲ್ಲಾ ನಿರ್ಮಿತಿ ಕೇಂದ್ರದಿಂದ ಸುಸಜ್ಜಿತ ಕಲ್ಯಾಣ ಮಂಟಪ ನಿರ್ಮಾಣ ಮಾಡಿಸುವುದಕ್ಕೆ ಕಾರಣೀಕರ್ತರಾಗಿದ್ದರು.

ಮುಂಡಗೋಡ ತಾಲೂಕಿನಲ್ಲೇ ಈ ರೀತಿಯ ಬೃಹತ್ ಕಲ್ಯಾಣ ಮಂಟಪ ಮತ್ತೊಂದಿಲ್ಲ, ಈ ಕಲ್ಯಾಣ ಮಂಟಪ ನಿರ್ಮಾಣದಿಂದ ಕಾರ್ಮಿಕ ವರ್ಗದವ–ರಿಗೂ ಹಾಗೂ ಜನಸಾಮಾನ್ಯರಿಗೂ ಮದುವೆ ಸೇ–ರಿದಂತೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಸಾಕಷ್ಟು ಅನುಕೂಲಕರವಾಗಿದೆ. ಆದರೆ ನಗರದ ಹೃದಯ ಭಾಗದಿಂದ ಸುಮಾರು 2 ಕಿ.ಮೀ ಗಿಂತಲೂ ಹೆಚ್ಚಿನ ದೂರ ಇರುವ ಕಾರ್ಮಿಕರ ಸಮುದಾಯ ಭವನಕ್ಕೆ ತೆರಳಲು ಘನತ್ಯಾಜ್ಯ ಘಟಕದ ವರೆಗಿನ ಸುಮಾರು 1 ಕಿ.ಮೀ. ನಷ್ಟು ರಸ್ತೆ ಸರಿ ಇಲ್ಲದೆ ಹೊಂಡಗಳಿಂದಲೇ ಆವೃತವಾಗಿದೆ, ಬಂಕಾಪುರ ರಸ್ತೆಯ ಕ್ರಾಸ್ ನಿಂದ ಕಾರ್ಮಿಕ ಸಮುದಾಯ ಭವನದವರೆಗೂ ಒಂದೇ ಒಂದು ವಿದ್ಯುತ್ ಬೀದಿ ದೀಪದ ವ್ಯವಸ್ಥೆ ಇರುವುದಿಲ್ಲ. ಸುಮಾರು 2 ಕಿ.ಮೀ. ರಸ್ತೆಯ ದಾರಿ ಮಧ್ಯೆ ಅಲ್ಲಲ್ಲಿ ಬಟ್ಟೆಗಳು,ಕಸ ಹಾಗೂ ವೈದ್ಯಕೀಯ ತ್ಯಾಜ್ಯವನ್ನೂ ಸುಡಲಾಗುತ್ತಿದೆ ಇದರಿಂದ ಭವನಕ್ಕೆ ತೆರಳುವವರು ಹೊಗೆ ಸೇವನೆ ಮಾಡಿಕೊಂಡೇ ಸಂಚಾರ ಮಾಡಬೇಕಿದೆ. ಸಮುದಾಯ ಭವನ ಸಿಟಿ ಫಾರಂ ರಸ್ತೆಯಲ್ಲೇ ಬರುವುದರಿಂದ ಇಲ್ಲಿಗೆ ಬರಲು , ನಗರ ಭಾಗದಿಂದ ಬಂಕಾಪುರ ರಸ್ತೆಯವರೆಗೂ ಸಾಗಿ ಬಲಕ್ಕೆ ತಿರುವು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿ ಕಾರ್ಮಿಕ ಸಮುದಾಯ ಭವನಕ್ಕೆ ತೆರಳುವ ರಸ್ತೆ ಎಂದು ಒಂದೇ ಒಂದು ನಾಮಫಲಕ ಕೂಡಾ ಇರುವುದಿಲ್ಲ, ಇದರಿಂದ ಎಷ್ಟೋ ಬಾರಿ ಕಾರ್ಮಿಕ ಸಮುದಾಯ ಭವನಕ್ಕೆ ಬರುವ ಬೇರೆ ಊರಿನ ಜನ ದಾರಿ ತಪ್ಪಿ ಸನವಳ್ಳಿ ವರೆಗೆ ಹೋದ ಉದಾಹರಣೆಗಳೂ ಕೂಡಾ ಉಂಟು , ಮೂರು ದಾರಿಗಳು ಸೇರುವ ಕತ್ರಿ (ಕ್ರಾಸ್) ಆಗಿರುವುದರಿಂದ ಅಮಾವಾಸ್ಯೆ ಹಾಗೂ ಹುಣ್ಣಿಮೆಗಳಲ್ಲಿ ಈ ರಸ್ತೆಯಲ್ಲಿ ವಾಮಾಚಾರದ ಪ್ರಯೋಗಗಳು ನಡೆಯುತ್ತಿದ್ದು, ಕುಂಬಳಕಾಯಿ ,ತೆಂಗಿನಕಾಯಿ, ನಿಂಬೆಹಣ್ಣು, ಗೊಂಬೆ ಎಲ್ಲಾ ಕಡೆ ಚೆಲ್ಲುವುದರಿಂದ ರಾತ್ರಿ ವೇಳೆ ಬೆಳಕಿನ ವ್ಯವಸ್ಥೆ ಇಲ್ಲದೆ ಸಂಚರಿಸಲು ಭಯ ಆಗುತ್ತದೆ ಎಂದು ಹೇಳುತ್ತಾರೆ ಹೆಸರು ಹೇಳಲು ಇಚ್ಚಿಸದ ಘನತ್ಯಾಜ್ಯ ವಿಲೇವಾರಿ ಘಟಕದ ಸಿಬ್ಬಂದಿ. ಮಳೆಗಾಲದಲ್ಲಂತೂ ಈ ರಸ್ತೆ ಕೆಸರುಮಯವಾಗಿ ಬೈಕ್ ಕಾರು ಸೇರಿದಂತೆ ಲಘು ವಾಹನಗಳು ಸಂಚ–ರಿಸಲು ಸಾಕಷ್ಟು ತೊಂದರೆ ಆಗುತ್ತಿದೆ, ಅದರಲ್ಲೂ ಹೆಬ್ಬಾರ್ ನಗರದಲ್ಲಿ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿ ಚಾಲ್ತಿಯಲ್ಲಿದ್ದು ಸಿಮೆಂಟ್ ಕಡಿ, ಎಂ ಸ್ಯಾಂಡ್ ಸಾಗಿಸುವ ವಾಹನಗಳಿಂದ ಧೂಳಿನ ರಾಶಿಯೇ ಆಗುತ್ತಿದೆ. ಇದರಿಂದ ಕಾರ್ಯಕ್ರಮಗಳಿದ್ದಾಗ ಭವನಕ್ಕೆ ಬರುವವರಿಗೆ ಧೂಳಿನ ಸ್ವಾಗತ ಸಿಗುತ್ತಿದೆ ಅದಕ್ಕೆ ಕಾರ್ಯಕ್ರಮಗಳ ದಿನ ರಸ್ತೆಗೆ ನೀರು ಹಾಯಿಸಬೇಕು ಎಂದು ಹೇಳುತ್ತಾರೆ ಕೆಲ ಸಾರ್ವಜನಿಕರು.

ಕಾರ್ಯಕ್ರಮ ಆಯೋಜನೆ ಮಾಡುವವರಿಗೆ ಕಡಿಮೆ ವೆಚ್ಚದಲ್ಲಿ ಸುಸಜ್ಜಿತ ಭವನ ಹೈಟೆಕ್ ಮಾದರಿಯಲ್ಲಿದೆ ,ಅಡುಗೆ ಪಾತ್ರೆಗಳು , ಡೈನಿಂಗ್ ಹಾಲ್ , ಮದುವೆ ಹಾಲ್ ಸೇರಿದಂತೆ ಪ್ರತಿಯೊಂದೂ ಉತ್ಕೃಷ್ಟ ಮಟ್ಟದಲ್ಲಿದೆ ಭವನದ ಬಲಭಾಗದಲ್ಲಿ ಸುಮಾರು ಒಂದು ಎಕರೆಯಷ್ಟು ಹೆಚ್ಚಿನ ಜಾಗ ಇರುವುದರಿಂದ ವಾಹನ ಪಾರ್ಕಿಂಗ್ ಸೇ–ರಿದಂತೆ ಇನ್ನಿತರ ಸೌಲಭ್ಯ ಒದಗಿಸಲು ಅವಕಾಶವಿದೆ, ಈ ಬಗ್ಗೆ ಅಧಿಕಾರಿಗಳು ಪರಿಶೀಲಿಸಬೇಕಿದೆ. ಆದರೆ ಕೆಲ ಮೂಲ ಸೌಕರ್ಯದ ಸಮಸ್ಯೆಗಳಿಂದ ಭವನ ಸಾಕಷ್ಟು ಬುಕಿಂಗ್ ಆಗುತ್ತಿಲ್ಲ, ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗಳನ್ನು ಪರಿಹರಿಸಿದ್ದೆ ಆದಲ್ಲಿ ಸಮುದಾಯ ಭವನ ಜನರಿಗೆ ಸಾಕಷ್ಟು ಅನುಕೂಲಕರವಾಗಲಿದೆ ಎಂದು ಹೇಳುತ್ತಾರೆ ಮುಂಡಗೋಡ ನಾಗರಿಕರು. ಮುಂಡಗೋಡಕ್ಕೆ ಶಾಸಕರ ಕಾಳಜಿಯಿಂದ ಸುಸಜ್ಜಿತ ಕಾರ್ಮಿಕ ಭವನ ಮತ್ತು ಕಾರ್ಮಿಕ ಸಮುದಾಯ ಭವನ ನಿರ್ಮಾಣ ಆಗಿದೆ, ಒಂದು ದಿನದ ಯಾವುದೇ ಕಾರ್ಯಕ್ರಮಗಳಿಗೆ ಕಾರ್ಮಿಕ ಮಂಡಳಿಯು 20,000 ರೂಪಾಯಿಗಳನ್ನು ಬಾಡಿಗೆಯಾಗಿ ನಿರ್ಧರಿಸಿದೆ, ಬಾಡಿಗೆ ಪಡೆಯುವವರು ಮಂಡಳಿ ಹೆಸರಿಗೆ 20,000 ಡಿಡಿ ಮಾಡಿಸಿದರೆ ಭವನ ಬುಕಿಂಗ್ ಆಗುತ್ತದೆ. ಮಂಡಳಿಗೆ ಲಾಭದಾಯಕವಾಗಿರುವ ಈ ಸುಸಜ್ಜಿತ ಸಮುದಾಯ ಭವನದ ಸಣ್ಣ ಪುಟ್ಟ ಸಮಸ್ಯೆ ಬಗೆಹರಿಸಬೇಕಿದೆ.

**ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಮುದಾಯ ಭವನಕ್ಕೆ ಹೋಗುವ ರಸ್ತೆ ,ವಿದ್ಯುತ್ ದೀಪ ಹಾಗೂ ನಾಮಫಲಕ ಗಳಂತಹ ಸಣ್ಣ ಪುಟ್ಟ ಸಮಸ್ಯೆಗಳನ್ನು ಬಗೆಹರಿಸಿದ್ದೆ ಆದಲ್ಲಿ ಸಮುದಾಯ ಭವನ ಮುಂದಿನ ದಿನಗಳಲ್ಲಿ ಜನರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.**

**ರಸ್ತೆ ಹಾಗೂ ಬೀದಿ ದೀಪದ ವ್ಯವಸ್ಥೆ ಲೋಕೋಪಯೋಗಿ ಹಾಗೂ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ, ನಾಮಫಲಕ ಸೇರಿದಂತೆ ಕೆಲ ಸಮಸ್ಯೆಗಳು ಗಮನಕ್ಕಿದ್ದು ಮುಂದಿನ ದಿನಗಳಲ್ಲಿ ಬಗೆಹರಿಸಲಾಗುವುದು.**

**–ಕಾರ್ಮಿಕ ಇಲಾಖೆ ಅಧಿಕಾರಿಗಳು**



ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಹಂಡಿತವಳ್ಳಿ ಗ್ರಾಮ ಪಂಚಾಯತಿ ಸಿಬ್ಬಂದಿಯವರಿಂದ ನಮ್ಮ ಕರುನಾಡ ಕಂದ ಕ್ಯಾಲೆಂಡರ್ ಬಿಡುಗಡೆ ಮಾಡಿದ ಸಂದರ್ಭ.

# ಕಾಡುಗೊಲ್ಲ (ಪ್ರವರ್ಗ–1) ಹೆಸರಿನಲ್ಲಿ ಜಾತಿ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ




**ಜಯನಗರ/ಕೂಡ್ಲಿಗಿ :** ಕಾಡುಗೊಲ್ಲ ಬುಡಕಟ್ಟು ಅತ್ಯಂತ ಪ್ರಾಚೀನವಾದದ್ದು ಅರಣ್ಯ ನೀತಿಗಳು ಗಟ್ಟಿಯಾದಂತೆ, ಹುಲ್ಲುಗಾವಲು ಪ್ರದೇಶಗಳು ನಾಶವಾಗುವ ಹಿನ್ನೆಲೆಯಲ್ಲಿ ಪಶುಪಾಲನೆಯೂ ವಿರಳ ಅನಿಸಿತು. ಕಾಡುಗೊಲ್ಲ ಬುಡಕಟ್ಟಿನವರು ಆದ–ುನಿಕತೆಯ ಸಮಸ್ಯೆ – ಸವಾಲುಗಳಿಗೆ ಎದುರಾದ ಸಂದರ್ಭ 21 ನೆಯ ಶತಮಾನದಲ್ಲಿ ಪಶುಪಾಲನೆಯನ್ನು ಕಳೆದುಕೊಳ್ಳುತ್ತಿರುವ ಸ್ಥಿತಿಯನ್ನು ಗಮನಿಸಿದ ಸಂಘಟನೆಕಾರರು ಕಾಡುಗೊಲ್ಲ ಜಾತಿ ಪ್ರಮಾಣ ಪತ್ರವನ್ನು ಪಡೆಯಲು ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಡಾ. ಶ್ರೀನಿವಾಸ್. ಎನ್. ಟಿ. ಅವರಿಗೆ ಮನವಿ ಮಾಡಿಕೊಂಡಿದ್ದರು. ಮಾನ್ಯ ಶಾಸಕರು ನೆಲಮೂಲ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬಂದಿರುವುದರಿಂದ ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡು ಸ್ಪಂದಿಸಲು ಸಾಧ್ಯವಾಯಿತು. ಕೂಡಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿ, ಕಾನೂನಾತ್ಮಕ ಮತ್ತು ಸರ್ಕಾರದ ಗಮನಕ್ಕೆ ತಂದು, ತಾಲೂಕಿನ ಅಧಿಕಾರಿಗಳಿಂದ ಕಾಡುಗೊಲ್ಲ (ಪ್ರವರ್ಗ –1) ಎಂಬ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರವನ್ನು ಕೊಡಿಸುವಲ್ಲಿ ಯಶಸ್ವಿಯಾಗಿ ಜನರ ಮನ್ನಣೆಗೆ ಪಾತ್ರರಾದರು.

**ವರದಿ : ಗುರುರಾಜ್ ಎಲ್, ಕಲ್ಲಹಳ್ಳಿ ಟಿ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ವಿಜಯಪುರ ಜಿಲ್ಲೆ ಅಲ್ಲದೆ ಕರ್ನಾಟಕದಲ್ಲಿ ನಂಬರ್ ಒನ್ : ಶ್ರೀ ಯುತ ಚೇತನ ಭಾವಿಕಟ್ಟಿ



ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಸ್ಥಳೀಯ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾದ "ದಿ ತಾಳಿಕೋಟ ಸಹಕಾರಿ ಬ್ಯಾಂಕ್ ನಿಯಮಿತ" ಆಡಳಿತ ಮಂಡಳಿಯ ಸದಸ್ಯರ ಆಯ್ಕೆ ಚುನಾವಣೆ ದಿನಾಂಕ 19-1-2025 ರಂದು ಚುನಾವಣೆ ನಡೆಸಲಾಗುತ್ತಿದೆ ಎಂದು ಚುನಾವಣಾ ಅಧಿಕಾರಿಗಳಾದ ಶ್ರೀ ಯುತ ಚೇತನ ಭಾವಿಕಟ್ಟಿ ಅವರು ಅಧಿಕೃತವಾಗಿ ಘೋಷಣೆ ಮಾಡಿದ್ದರು. ನಿಗದಿಯಾದ ದಿನಾಂಕದಂತೆ ಬ್ಯಾಂಕಿನ ಸಾಮಾನ್ಯ ಕ್ಷೇತ್ರದಲ್ಲಿ 7 ಸದಸ್ಯರು ಆಯ್ಕೆ ಮಾಡಬೇಕಾಗಿದ್ದು ಅದಕ್ಕೆ 14 ಅಭ್ಯರ್ಥಿಗಳು ಸ್ಪರ್ಧಿಸಿದ್ದರು ,ಸಾಮಾನ್ಯ ಮಹಿಳಾ ಮೀಸಲು ಕ್ಷೇತ್ರದ ಪೈಕಿ 4 ಅಭ್ಯರ್ಥಿಗಳು ಸ್ಪರ್ಧಿಸಿದ್ದರು, ಹಿಂದಳಿದ ಅ ಮತ್ತು ಬ ಎರಡು, ಪ.ಜಾತಿ ಪ.ಪಂಗಡ ತಲಾ ಒಬ್ಬರಂತೆ ಆಯ್ಕೆ ಮಾಡಬೇಕಾದಲ್ಲಿ ಒಂದೊಂದಕ್ಕೆ ಮೂರು ನಾಲ್ಕು ಜನ ಸ್ಪರ್ಧಿಸಿದ್ದರು ಆದರೆ ಈ ಚುನಾವಣೆ ಬೆಳಗಾವಿ ಪ್ರತಿಷ್ಠಿತ ಪಿ.ಎಲ್ .ಡಿ ಬ್ಯಾಂಕ್ ನ ಮಾನ್ಯ ಶ್ರೀ ಮತಿ ಮಹಿಳಾ ಮತ್ತು ಮಕ್ಕಳ ಸಚಿವೆಯರಾದ ಲಕ್ಷ್ಮೀ ಹೆಬ್ಬಾಳ್ಕರ ಮತ್ತು ಮಾನ್ಯ ಮಾಜಿ ಸಚಿವರಾದ ರಮೇಶ ಜಾರಕಿಹೊಳಿ ಬ್ರದರ್ಸ್ ಚುನಾವಣೆಯಂತೆ ಬಿಂಬಿತವಾಗಿದೆ, 25,000=00 ಬಂಡವಾಳ ಹೂಡಿಕೆಯಿಂದ ಪ್ರಾರಂಭಗೊಂಡು ಇಂದು ರೂ.2.5 ಕೋಟಿಯವರಗೆ ಸಂಸ್ಥೆಯನ್ನು ಬೆಳೆಸಿ ಗಣ್ಯಮಾನ್ಯರ ನೆನೆದು ಅವರ ನೆರಳಿನಂತೆ ಸಂಸ್ಥೆಯನ್ನು ಅವರಿಂದ ಇಂದಿನವರೆಗೂ ಸುಭದ್ರವಾಗಿ ಬೆಳೆಸಿ ಉಳಿಸಿಕೊಂಡು ಬಂದಿದ್ದಾರೆ ಹಳೆಯ ಪೆನಲ್ ಎಂದು ನಾಮಕರಣ ಮಾಡಿಕೊಂಡು ಚುನಾವಣೆ ಎಂಬ ಅಖಾಡದಲ್ಲಿ ಒಗ್ಗಟ್ಟಾಗಿ ಧುಮುಕಿ ಗೆಲ್ಲುವವರೆಗೂ ಎದುರಾಳಿಗಳಿಗೆ ಎದೆಗುಂದದೆ ತಾವು ಅಧಿಕಾರ ಅವಧಿಯಲ್ಲಿ ಮಾಡಿದ ನಿಸ್ವಾರ್ಥ ಸೇವೆಯಿಂದ ಮತ್ತು ಅದನ್ನು ಹಿರಿಯರು ಠೇವಣಿದಾರರ ಹಣ ಭದ್ರವಾಗಿ ಕಾಪಾಡಿಕೊಂಡು ಬಂದಿದ್ದರ ಪರಿಣಾಮವಾಗಿ ದಿನಾಂಕ 19-1-2025 ರಂದು ನಡೆದು ಒಟ್ಟು 3500 ಮತದಾರರ ಪೈಕಿ 2990 ಮತಗಳು ಚಲಾವಣೆಯಾಗಿದ್ದು ಅದೇ ದಿನ ಸಾಯಂಕಾಲ 4:50 ಘಂಟೆಯಿಂದ ಮತ ಎಣಿಕೆ ಪ್ರಾರಂಭಗೊಂಡು ರಾತ್ರಿ 9 ಘಂಟೆಗೆ ಎಣಿಕೆ ಮುಕ್ತಾಯಗೊಂಡಿತು ನಂತರ ಚುನಾವಣಾಧಿಕಾರಿಗಳಾದ ಶ್ರೀ ಯುತ ಚೇತನ ಭಾವಿಕಟ್ಟಿ ಅವರು ಚುನಾವಣೆಯಲ್ಲಿ ಜಯಶಾಲಿಯಾದವರ ಪಟ್ಟಿ ಬಿಡುಗಡೆ ಮಾಡಿದರು.

**ಸಾಮಾನ್ಯ ಕ್ಷೇತ್ರದಿಂದ**

**1) ಶ್ರೀ ಮಾನ್ಯ ಕಾಶಿನಾಥ ಸಜ್ಜನ (ಬಿದರಕುಂದಿ) 2006**
**2) ಶ್ರೀ ಮಾನ್ಯ ದತ್ತಾತ್ರೇಯ ಸುಬ್ಬಯ್ಯ ಹೆಬ್ಬಸೂರ 1785**
**3) ಶ್ರೀ ಮಾನ್ಯ ಈಶ್ವರಪ್ಪ ಬ.ಬಿಳೇಭಾವಿ 1490**
**4) ಶ್ರೀ ಮಾನ್ಯ ಧ್ಯಾಮನಗೌಡ ಕಲ್ಲನಗೌಡ ಪಾಟೀಲ (ಮಿಣಜಗಿ) 1452**
**5) ಶ್ರೀ ಮಾನ್ಯ ಚಿಂತಪ್ಪಗೌಡ ಸಾ.ಯಾಳಗಿ (ಬ ಸಾಲವಾಡಗಿ) 1430**
**6) ಶ್ರೀ ಮಾನ್ಯ ಮುರಿಗೆಪ್ಪ ಸಂ ಸರಶಟ್ಟಿ 1328**
**7) ಹೊಸ ಫೈನಲ್ ಹೊಸ ಹುರಿಯಾಳುಗಳಾದ ಶ್ರೀ ಮಾನ್ಯ ಪ್ರಲ್ಹಾದಸಿಂಗ್ ಹಜೇರಿ ಅವರು ನಾಗಪ್ಪ ಚಿನಗುಡಿಯವರನ್ನು ಪರಾಭವಗೊಳಿಸಿ 1192 ಇವರೆಲ್ಲರೂ ಅಂಕಿ ಅಂಶಗಳಲ್ಲಿ ಕಾಣಿಸಿದ ಮತಗಳನ್ನು ಪಡೆದು ಜಯಗಳಿಸಿದ್ದಾರೆ.**

ಎರಡನೆಯದಾಗಿ ಮಹಿಳಾ ಸಾಮಾನ್ಯ ಮೀಸಲು ಕ್ಷೇತ್ರದಿಂದ ಶ್ರೀ ಗಿರಿಜಾಬಾಯಿ ಕೊಡಗಾನೂರ 2110 ಮತ್ತು ಶ್ರೀ ಮತಿ ಶೈಲಾ ಬಡದಾಳೆ 1103 ಮತಗಳನ್ನು ಪಡೆದು ಜಯಗಳಿಸಿದರು ಹಿಂದುಳಿದ ಅ ವರ್ಗ 3 ಅಭ್ಯರ್ಥಿಗಳ ಸ್ಪರ್ಧಿಸಿದ್ದರ ಪೈಕಿ ಮೀಸಲು ಕ್ಷೇತ್ರದಿಂದ ಶ್ರೀ ಮಾನ್ಯ ಅಮರಸಿಂಗ್ ಬಾಬು ಹಜೇರಿ 1518 ಮತಗಳನ್ನು ಪಡೆದು ಜಯಗಳಿಸಿದರು, ಹಿಂದುಳಿದ ಬ. ಮೀ. ಕ್ಷೇತ್ರ 3 ಅಭ್ಯರ್ಥಿಗಳ ಸ್ಪರ್ಧೆಯ ಪೈಕಿ ಶ್ರೀ ಮಾನ್ಯ ಸುರೇಶ ಪಾಟೀಲ 1367 ಮತಗಳನ್ನು ಪಡೆದು ಜಯಗಳಿಸಿದರು. ಪ. ಜಾತಿ ಮೀಸಲು ಕ್ಷೇತ್ರ 3' ಅಭ್ಯರ್ಥಿಗಳ ಸ್ಪರ್ಧೆಯ ಪೈಕಿ ಶ್ರೀ ಮಾನ್ಯ ರಾಮಪ್ಪ ಕಟ್ಟಿಮನಿ 1445 ಮತಗಳನ್ನು ಪಡೆದು ಜಯಗಳಿಸಿದರು , ಪ. ಪಂ. ಮೀಸಲು ಕ್ಷೇತ್ರ 3 ಅಭ್ಯರ್ಥಿಗಳ ಸ್ಪರ್ಧೆಯಲ್ಲಿ ಸಂಜೀವಪ್ಪ ಬರದೇನಾಳ 1575 ಮತಗಳನ್ನು ಜಯಗಳಿಸಿದರು ಎಂದು ತಿಳಿಸಿದರು.

ಚುನಾವಣೆ ಸಹಾಯಕರಾಗಿ ಶ್ರೀ ಯುತ ಆರ್.ಬಿ.ಧಮ್ಮೂರಮಠ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗವರು, ಪಂಚಾಯತ ಬಿಲ್ ಕಲೆಕ್ಟರ್ ಮುದಿಗೌಡ ಎಮ್ ಮುಗಳಿ ಹಾಗೂ ಸಿಬ್ಬಂದಿ ವರ್ಗದವರು ಈ ಚುನಾವಣೆಯಲ್ಲಿ ಭಾಗವಹಿಸಿದ್ದರು. ಅಲ್ಲದೆ ಈ ಚುನಾವಣೆ ಬಂದೋಬಸ್ತ್ ಸಲುವಾಗಿ ಸ್ಥಳೀಯ ಆರಕ್ಷಕ ಸಿಬ್ಬಂದಿ ವರ್ಗದವರು ಚುನಾವಣೆ ಮೇಲುಸ್ತುವಾರಿಯಾಗಿ ಡಿ.ವೈ. ಎಸ್.ಪಿ ಬೆಲ್ಲದ ನಂದಗಾವಿ , ಸಿ.ಪಿ.ಐ.ಮಲ್ಲಿಕಾರ್ಜುನ ತುಳಸಿಗೇರಿ, ಸ್ಥಳೀಯ ಪಿ.ಎಸ್.ಐ ರಾಮನಗೌಡ ಸಂಕನಾಳ, ಅಪರಾಧ ವಿಭಾಗದ ಪಿ.ಎಸ್.ಐ ಆರ್ ಎಸ್.ಭಂಗಿ ಭಾಗವಹಿಸಿದ್ದರು. ಚುನಾವಣೆ ಫಲಿತಾಂಶ ಹೊರ ಬೀಳುತ್ತಿದ್ದಂತೆ ಜಯಗಳಿಸಿದವರ ಅಪಾರ ಅಭಿಮಾನಿಗಳು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

**ವರದಿಗಾರರು : ಸಂಗಮೇಶ ಸಿ ಚೌದರಿ**

---

# ಕೇಳೋರು ಯಾರು ಮಕ್ಕಳು ಗೋಳು !?



ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಹೆಡ್ ಪೋಸ್ಟ್ ಆಫೀಸಿನಲ್ಲಿ ಆಧಾರ್ ಕಾರ್ಡ್ ಗೋಸ್ಕರ ಪರದಾಡುತ್ತಿರುವ ಶಾಲಾ ಮಕ್ಕಳು.

ಚಳಿಯಲ್ಲಿ ಬೆಳಗಿನ ಜಾವ ನಾಲ್ಕು ಗಂಟೆಗೆ ಬಂದರೂ ನೂರಾರು ಮಂದಿ ಪಾಳೆ ಹಚ್ಚಿರುತ್ತಾರೆ. ದಿನ ಒಂದಕ್ಕೆ ಇಲ್ಲಿ ಕೊಡುವುದು 20 ಕೂಪನ್ ಮಾತ್ರ ಸಿಕ್ಕವರಿಗೆ ಸಿಕ್ಕಿತು ಸಿಗದವರಿಗೆ ಇಲ್ಲ ಈ ಮಕ್ಕಳ ಗೋಳಾಟ ನೋಡಿ ಸುಮ್ಮನೆ ಕುಳಿತ ತಾಲೂಕ ಅಧಿಕಾ-ರಿಗಳು ಅದೊಂದೇ ಆಧಾರ್ ಕಾರ್ಡ್ ಸೆಂಟರ್ ಅಲ್ಲಿ ಹೋಗಿ ಮಾಡಿಸಿ ಎನ್ನುತ್ತಾ ಮಕ್ಕಳ ಗೋಳಾಟಕ್ಕೆ ಕಾರಣರಾಗಿದ್ದಾರೆ ಹಾಗಿದ್ದರೆ ಇದಕ್ಕೆ ಪರಿಹಾರ ಏನು? ಕೇಳೋರು ಯಾರು ಮಕ್ಕಳು ಗೋಳು?

**ವರದಿ ಮಂಜು ಎಮ್.ಚಿಕ್ಕಣ್ಣನವರ**

---

# ಸಾರ್ವಜನಿಕರ ಅಚ್ಚು ಮೆಚ್ಚಿನ ಪಿ.ಡಿ.ಓ ಶ್ರೀ ಜಿ.ಐ ಬರಗಿ



ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕು ವ್ಯಾಪ್ತಿಯಲ್ಲಿ ಬರುವ ಬೆಳವಡಿ ಗ್ರಾಮದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜಿ.ಐ. ಬರಗಿ ಅವರು ಸಾರ್ವಜನಿಕರ ಯಾವುದೇ ಕೆಲಸಕ್ಕೂ ತುಂಬಾ ಬೇಗನೆ ಸ್ಪಂದನೆ ಮಾಡುತ್ತಿದ್ದು ಸಾರ್ವಜನಿಕರು ಸಮಸ್ಯೆಗಳನ್ನು ಹೊತ್ತುಕೊಂಡು ಬಂದಾಗ ಅವರಿವರೆನ್ನದೆ ಯಾರನ್ನೂ ಸಹ ಕಾಯಿಸದೆ, ಸತಾಯಿಸದೆ ಅವರ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಸಾರ್ವಜನಿಕರ ಪ್ರೀತಿಗೆ ಪಾತ್ರರಾಗಿದ್ದಾರೆ ಆದುದರಿಂದ ಸಾರ್ವಜನಿಕರಿಗೆ ಉತ್ತಮ ಸೇವೆ ಸಲ್ಲಿಸುವ ಇಂತಹ ಒಳ್ಳೆ ಮನಸುಳ್ಳ ಅಧಿಕಾರಿಗಳ ಅವಶ್ಯಕತೆ ನಮ್ಮ ಬೆಳವಡಿ ಗ್ರಾಮ ಪಂಚಾಯಿತಿಗೆ ತುಂಬಾನೆ ಇದ್ದು ಇನ್ನೂ ಮುಂದಿನ ಅಭಿವೃದ್ಧಿ ಕೆಲಸಕ್ಕೆ ಇಂತಹ ಅಭಿವೃದ್ಧಿಪರ ಅಧಿಕಾರಿಗಳ ಅವಶ್ಯಕತೆ ಈ ಪಂಚಾಯಿತಿಗೆ ಬಹಳ ಮುಖ್ಯವಾಗಿದೆ ಆದುದರಿಂದ ಇವರನ್ನು ಮುಂದಿನ ದಿನಮಾನಗಳಲ್ಲಿ ಇದೇ ಪಂಚಾಯತಿಯಲ್ಲಿ ಮುಂದುವರಿಸಬೇಕೆಂಬುದು ಸಾರ್ವಜನಿಕರ ಬೇಡಿಕೆಯಾಗಿದೆ.

**ವರದಿ : ಮಂಜು .ಎಮ್.ಚಿಕ್ಕಣ್ಣನವರ**

---

# ಕ.ರ.ವೇ ಸ್ವತಂತ್ರ ಬಣದ ಪದಾಧಿಕಾರಿಗಳಿಂದ ಪಿ.ಎಸ್.ಐ ವಿಜಯ ಪ್ರತಾಪ್ ರಿಗೆ ಗೌರವ ಸನ್ಮಾನ



ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪಟ್ಟಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವತಂತ್ರ ಬಣದ ವತಿಯಿಂದ ಯಲಬುರ್ಗಾ ಪೊಲೀಸ್ ಠಾಣೆಯ ಪಿ.ಎಸ್.ಐ ವಿಜಯ ಪ್ರತಾಪ್ ಅವರಿಗೆ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವತಂತ್ರ ಬಣದ ಕೊಪ್ಪಳ ಜಿಲ್ಲಾ ಯುವ ಘಟಕದ ಅಧ್ಯಕ್ಷರು ಮೌನೇಶ ಎಚ್ ನಾಯಕ, ಜಿಲ್ಲಾ ಯುವ ಘಟಕ ಸಹ ಕಾರ್ಯದರ್ಶಿ ಮೇಘರಾಜ ಕಮ್ಮಾರ, ಯಲಬುರ್ಗಾ ತಾಲೂಕು ಅಧ್ಯಕ್ಷರು ಶಂಕ್ರಪ್ಪ ಶಾಖಾಪುರ, ಯಲಬುರ್ಗಾ ತಾಲೂಕು ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಕುಲಕರ್ಣಿ ಉಪಸ್ಥಿತರಿದ್ದರು.

**ವರದಿ ಮೌನೇಶ ಎಚ್. ನಾಯಕ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ಪ್ರಬಲ ಆಕಾಂಕ್ಷಿಗಳಿಗೆ ಕೊಡಲಿ ಏಟು ಕೊಟ್ಟ ಬಿಜೆಪಿ ಮಾಜಿ, ಹಾಲಿ ಶಾಸಕರು

ಕಲ್ಬುರ್ಗಿ ಜಿಲ್ಲೆಯ ಭಾರತೀಯ ಜನತಾ ಪಕ್ಷದ ಗ್ರಾಮೀಣ ಅಧ್ಯಕ್ಷ ಸ್ಥಾನವನ್ನು ಹಿಂದುಳಿದ ವರ್ಗದ ಸಮಾಜದವರಿಗೆ ಕಲ್ಪಿಸಬೇಕಾಗಿತ್ತು ಆದರೆ ಹಿಂದುಳಿದ ವರ್ಗದ ಸಮಾಜಕ್ಕೆ ಜಿಲ್ಲೆಯ ಭಾರತೀಯ ಜನತಾ ಪಕ್ಷದ ಶಾಸಕರು, ಮಾಜಿ ಶಾಸಕರು ಹಾಗೂ ಪಕ್ಷದ ಹಿರಿಯರು ಸೇರಿ ಅನ್ಯಾಯ ಮಾಡಿ ಮತ್ತೆ ಲಿಂಗಾಯತ ಸಮಾಜದ ಅಶೋಕ ಬಗಲಿಯವರಿಗೆ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದು ಅಕ್ಷಮ್ಯ ಮಲತಾಯಿ ಧೋರಣೆಯಾಗಿದೆ ಎಂದು ಬಿಜೆಪಿ ನಾಯಕರು ಮತ್ತು ಆಕಾಂಕ್ಷಿಗಳ ಕೂಗಾಗಿತ್ತು.

ಕಲಬುರ್ಗಿ ಜಿಲ್ಲೆಯಲ್ಲಿ ವಿಶೇಷವಾಗಿ ಕೋಲಿ ಸಮಾಜ, ಗಾಣಿಗ ಸಮಾಜ, ಕುರುಬ ಸಮಾಜ ಹಾಗೂ ಅಲ್ಪ-ಸ್ವಲ್ಪ ಹಿಂದುಳಿದ ವರ್ಗದ ಜನಾಂಗ ಹೆಚ್ಚಿನ ಜನಸಂಖ್ಯೆಯಲ್ಲಿದ್ದು ಯಾವುದೇ ಪ್ರಯೋಜನ ಇಲ್ಲದಂತಾಗಿದೆ, ಅರಳಗುಂಡಗಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ರೇವಣಸಿದ್ದಪ್ಪ ಸಂಕಾಲಿ,



ಕೋಲಿ ಸಮಾಜದ ಮುಖಂಡರಾದ ಅವಣ್ಣ ಮ್ಯಾಕೇರಿ, ಶರಣಪ್ಪ ತಳವಾರ ,ನಿಂಗರಾಜ್ ಕುರುಬ ಸಮಾಜದ ಹಿರಿಯ ಮುಖಂಡರು ಕೂಡಾ ಆಕಾಂಕ್ಷಿಯಾಗಿದ್ದರು ಆದರೆ ಈ ಪ್ರಬಲವಾಗಿರುವ ಈ ಮೂರು ಸಮಾಜದಲ್ಲಿ ಅವಕಾಶ ಕೊಡದೆ ಸುಮಾರು ದಿನಗಳ ಕಾಲ ಕಲಬುರಗಿ ಜಿಲ್ಲೆಯ ಬಿಜೆಪಿಯು ಒಂದೇ ಕಮ್ಯುನಿಟಿಗೆ ಅವಕಾಶಗಳು ಲಭಿಸುತ್ತಿದ್ದು ಹಾಗೂ ನಗರ ಅಧ್ಯಕ್ಷರು ಸಹ ಒಂದೇ ಕಮ್ಯುನಿಟಿಯವರಾಗಿದ್ದು ಹಾಗೂ ಚುನಾವಣೆಯಲ್ಲಿ ಸಹ ಒಂದೇ ಕಮ್ಯೂನಿಟಿ ಹೆಚ್ಚಿನ ಅಭ್ಯರ್ಥಿಗಳು ಆಗುತ್ತಿದ್ದು ಹೆಚ್ಚಿನ ಜನಸಂಖ್ಯೆ ಇರುವ ಹಿಂದುಳಿದ ವರ್ಗಕ್ಕೆ ಅನ್ಯಾಯ ಆಗಿದ್ದು ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಹಿಂದುಳಿದ ವರ್ಗ ತಕ್ಕ ಪಾಠ ಕಲಿಸಲಿದ್ದು ಹಾಗೂ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕುರುಬ ಸಮಾಜ, ಕೋಲಿ ಸಮಾಜ ವಿಶೇಷವಾಗಿ ಮತದಾನ ಮಾಡಿದ್ದು ಇದನ್ನು ಮರೆತು ಜಿಲ್ಲೆಯ ನಾಯಕರು ತಮ್ಮದೇ ಆದ ಮಾರ್ಗದಲ್ಲಿ ನಡೆಯುತ್ತಿದ್ದು ಇದನ್ನು ಖಂಡಿಸಲಾಗಿದೆ. ಸಮಸ್ತ ಕಲಬುರಗಿ ಜಿಲ್ಲೆಯ ಹಿಂದುಳಿದ ವರ್ಗದ ನಾಯಕರು, ಸಮಾಜದ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ಹಾಗೂ ಸಮಸ್ತ ಜೇವರ್ಗಿ ಜನಾಂಗೀಯ ವತಿಯಿಂದ ಖಂಡಿಸಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ವರದಿ: ಚಂದ್ರಶೇಖರ ಪಾಟೀಲ್**

# ಅವರೊಳ್ಳಿಯಲ್ಲಿ ಅದ್ದೂರಿಯಾಗಿ ಜರುಗಿದ 76ನೇ ಗಣರಾಜ್ಯೋತ್ಸವ

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಅವರೊಳ್ಳಿ ಗ್ರಾಮದ ಸರ್ಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮ ನಿಮಿತ್ತ ಬೆಳಿಗ್ಗೆ 7:00 ಯಿಂದ ಗ್ರಾಮದ ಪ್ರತಿಯೊಂದು ಓಣಿಯಲ್ಲಿ ಗಣರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತಾ ಗ್ರಾಮದ ಹಿರಿಯರನ್ನು ಮತ್ತು ಯುವಕರು, ಎಲ್ಲರನ್ನೂ ಒಗ್ಗೂಡಿಸಿಕೊಂಡು ಪ್ರಾಥ-'ಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಧ್ವಜಾರೋಹಣ ಕಾರ್ಯಕ್ರಮ ಮುಗಿಸಿಕೊಂಡು ನಂತರ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತ್ಯಂತ ವಿಜೃಂಭಣೆಯಿಂದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.





ಧ್ವಜಾರೋಹಣ ಕಾರ್ಯಕ್ರಮವನ್ನು ಎಸ್ ಡಿ ಎಂ ಸಿ ಅಧ್ಯಕ್ಷರಾದ ರುದ್ರಪ್ಪ ಚವಲಗಿ ಅವರು ನೆರವೇ-ರಿಸಿಕೊಟ್ಟರು, ನಂತರ ಸ್ವಾಗತವನ್ನು ಮಾಯಪ್ಪನವರ್ ಗುರುಗಳು ನೆರವೇರಿಸಿ ಕೊಟ್ಟರು ನಂತರ ವಿದ್ಯಾರ್ಥಿಗಳಿಂದ ಭಾಷಣ, ನೃತ್ಯ, ನಾಟಕ ಮುಂತಾದವುಗಳನ್ನು ಆಯೋಜಿಸಲಾಗಿತ್ತು ತದ ನಂತರ ಗ್ರಾಮದ ಸರಕಾರಿ ಶಾಲೆಯನ್ನು ದತ್ತು ತೆಗೆದುಕೊಂಡಂತಹ ಜ್ಯೋತಿ ಬಾ ಭರಮಪ್ಪನವರ, ಕೊಡಚವಾಡ ಗ್ರಾಮ ಪಂಚಾಯತಿಯ ಅಧ್ಯಕ್ಷರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು, ಅವರೊಳ್ಳಿ ಗ್ರಾಮದ ಎಲ್ಲಾ ಹಿರಿಯರು, ಯುವಕರು,ವಿವಿಧ ಸಂಘ ಸಂಸ್ಥೆಯ ಅಧ್ಯಕ್ಷರು, ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಹೊಸದಾಗಿ ನಿರ್ಮಿಸಿದ ಮುಖ್ಯ ಕಚೇರಿಯನ್ನು ಉದ್ಘಾಟಿಸಲಾಯಿತು ಮುಖ್ಯ ಕಚೇರಿಯ ಕೋಣೆಯ ತುಂಬಾ ರಾಷ್ಟ್ರ ನಾಯಕರ , ವಿಜ್ಞಾನಿಗಳ, ಕವಿಗಳ, ಜ್ಞಾನಪೀಠ ಪುರಸ್ಕೃತರ, ಇನ್ನಿತರ ಹಲವಾರು ಮಹನೀಯರ ಭಾವಚಿತ್ರಗಳನ್ನು ಈ ಕೋಣೆಯಲ್ಲಿ ಕಾಣಬಹುದು.

**ವರದಿ: ಮುತ್ತು ದೇವನಪ್ಪಗೋಳ**

# ಲಚ್ಯಾಣ ಹೆಸ್ಕಾಂ ಶಾಖೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹೆಸ್ಕಾಂ ಕಛೇರಿ ಲಚ್ಯಾಣದಲ್ಲಿ 76ನೇ ಗಣರಾಜ್ಯೋತ್ಸವವನ್ನು ಆಚ-ರಿಸಲಾಯಿತು. ಲಚ್ಯಾಣ ಶಾಖೆಯ ಶಾಖಾಧಿಕಾರಿಗಳಾದ ಶ್ರೀ ಆರ್ ಆರ್ ಲಾಳಸಂಗಿ ಯವರು ಧ್ವಜಾರೋಹಣವನ್ನು ನೆರವೇರಿಸಿದ ನಂತರ ಮಾತನಾಡಿ ಎಲ್ಲಾ ಪವರ್ ಮೆನ್ ಗಳು ಯಾವುದೇ ಒಂದು ಕೆಲಸ ಮಾಡುವಾಗ ಕಂಪನಿಯಿಂದ ನೀಡಿದ ಸೇಫ್ಟಿ ಸಲಕರಣೆಯನ್ನು ಉಪಯೋಗಿಸಿಕೊಂಡು, ಯಾವುದೇ ಅನಾಹುತ ಆಗದ ಹಾಗೆ ಮುಂಜಾಗ್ರತೆ ವಹಿಸಿ ಕೆಲಸ ನಿರ್ವಹಿಸಬೇಕೆಂದು ತಿಳಿಸಿದರು.

ಅದೇ ತರಹ ಕಂಪನಿ ಆರ್ಥಿಕತೆಯ ದೃಷ್ಟಿಯಿಂದ ಎಲ್ಲರೂ ಸೇರಿಕೊಂಡು ಕಂದಾಯ ವಸೂಲಾತಿಯನ್ನು ಹಾಗೂ ಬಾಕಿ ಇರುವ ಎಲ್ಲಾ ಸ್ಥಾವರಗಳ ಬಾಕಿಯನ್ನು ವಸೂಲಾತಿಯನ್ನೂ ಮಾಡಬೇಕೆಂದು ತಿಳಿಸಿದರು. ಹಾಗೂ 11 ಕೆ.ವಿ ಮಾರ್ಗಗಳಲ್ಲಿ ಯಾವುದಾದರೂ ಕಂಬಗಳು ಹಾಳಾಗಿದ್ದಾರೆ ಅಥವಾ ವಾಯರ್ ಗಳು ಹಳೆಯದಾಗಿದ್ದರೆ, ಅದನ್ನು ಜಿಪಿಎಸ್ ಫೋಟೋ ಸಮೇತ ನಮಗೆ ತಿಳಿಸಿದರೆ ನಾವು ಅದನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಅವಗಳನ್ನು ಸರಿಪಡಿಸಿ ಕೊಡುತ್ತೇವೆ ಎಂದು ಹೇಳಿದರು.

ಅದೇ ತೆರನಾಗಿ ಮಾತನಾಡಿದ ಶ್ರೀ ಸಂತೋಷ್ ಬಣಗೊಂಡೆ ಇವರು ಲೈನ್ ಲಾಸ್ ಕಡಿಮೆ ಮಾಡಲು ಎಲ್ಲಿಯಾದರೂ ವಿದ್ಯುತ್ ಕಳ್ಳತನ ಕಂಡು ಬಂದರೆ ಅದನ್ನು ತಕ್ಷಣ ನಮ್ಮ ಶಾಖಾಧಿಕಾರಿಗಳಿಗೆ ತಿಳಿಸಬೇಕು ಎಂದು ಹೇಳಿದರು. ಎಲ್ಲರೂ ಒಗ್ಗಟ್ಟಾಗಿ ಹಾಗೂ ಜಾಗೃತರಾಗಿ ಕೆಲಸ ನಿರ್ವಹಿಸಿ ಶಾಖೆಗೆ ಒಳ್ಳೆಯ ಹೆಸರು ತರೋಣ ಎಂದು ಹೇಳಿದರು. ನಂತರ ಮಾತನಾಡಿದ ಶ್ರೀ ಶಾಂತು ತೆನ್ನಳ್ಳಿ ಎಲ್ಲರಿಗೂ 76 ನೇ ಗಣರಾಜ್ಯೋತ್ಸವದ ಶುಭಾಶಯಗಳು



ತಿಳಿಸಿದರು. ಈ ಸಂದರ್ಭದಲ್ಲಿ ಲಚ್ಯಾಣ ಶಾಖೆಯ ಎಲ್ಲಾ ಪವರ್ ಮೆನ್ ಗಳು, ಗ್ರಾಮ ವಿದ್ಯುತ್ ಪ್ರತಿನಿಧಿಗಳು ಹಾಗೂ ಸ್ಟೇಷನ್ ಆಪರೇಟರ್ ಗಳು ಭಾಗವಹಿಸಿದ್ದರು. ಶ್ರೀ ವಿಕಾಸ ಮುಜಾಗೊಂಡ ಇವರು ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ನಡೆಸಿಕೊಟ್ಟರು.

**– ಕರುನಾಡ ಕಂದ**

# ವಜ್ರಬಂಡಿ ಸ. ಹಿ. ಪ್ರಾ. ಶಾಲೆಯಲ್ಲಿ ಅದ್ದೂರಿಯಾಗಿ ಜರುಗಿದ 76ನೇ ಗಣರಾಜ್ಯೋತ್ಸವ

**ಕೊಪ್ಪಳ /ಯಲಬುರ್ಗಾ:** ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಜ್ರಬಂಡಿಯಲ್ಲಿ 76ನೇ ಗಣ-ರಾಜ್ಯೋತ್ಸವ ಕಾರ್ಯಕ್ರಮವನ್ನು ಅತ್ಯಂತ ಸಡಗರದಿಂದ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀ ನಾಗರಾಜ್ ಪೂಜಾರ್ ಅವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಚಂದವ್ವ ರಾಮಪ್ಪ ಲಮಾಣಿ ಹಾಗೂ ಅತಿಥಿಗಳಾಗಿ ಶಾಲೆಯ ಎಸ್. ಡಿ. ಎಮ್. ಸಿ ಸರ್ವ ಸದಸ್ಯರುಗಳು ಮತ್ತು ಗ್ರಾಮ ಪಂಚಾಯತಿಯ ಸರ್ವ ಸದಸ್ಯರು ಊರಿನ ಗಣ್ಯರು ಶಾಲೆಯ ಮುಖ್ಯ ಶಿಕ್ಷಕರು ಹಾಜರಿದ್ದರು. ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಮಕ್ಕಳು ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ ನೂರಾರು ಪೋಷಕರು ಹಾಗೂ ಶಾಲೆಯ ಶಿಕ್ಷಕ



ಬಳಗದವರು ಉಪಸ್ಥಿತರಿದ್ದರು.

**ವರದಿ ಮೌನೇಶ. ಎಚ್ ನಾಯಕ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01–02–2025 ಪುಟಗಳು:16

# ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ : ನಿಯಮಗಳು ಅನ್ವಯ

ಮಾಧ್ಯಮ ಮಾನ್ಯತಾ ಪತ್ರ ಹೊಂದಿರುವ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ಸೌಲಭ್ಯವನ್ನು ರಾಜ್ಯ ಸರ್ಕಾರ ಕಲ್ಪಿಸಿದೆ. ಈ ಮೂಲಕ ಬಜೆಟ್‌ನಲ್ಲಿ ಘೋಷಣೆ ಮಾಡಿ ಅದನ್ನು ಯಥಾವತ್ತಾಗಿ ಜಾರಿಗೆ ಕೊಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ನುಡಿದಂತೆ ನಡೆದಿದೆ.




ಉಚಿತ ಬಸ್‌ಪಾಸ್ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ವಿದ್ಯುನ್ಮಾನ ಅಥವಾ ಮುದ್ರಣ ಮಾಧ್ಯಮಗಳಲ್ಲಿ ಪೂರ್ಣಾವಧಿಗೆ ನೇಮಕಗೊಂಡು 4 ವರ್ಷಗಳ ಸೇವಾನುಭವ ಹೊಂದಿರುವ ಪತ್ರಕರ್ತರು ಅರ್ಜಿ ಸಲ್ಲಿಸಬಹುದು. ನೇಮಕಾತಿ ಆದೇಶ/ ವೇತನ ಪತ್ರ/ ಬ್ಯಾಂಕ್ ಸ್ಟೇಟ್‌ಮೆಂಟ್ ಇವುಗಳಲ್ಲಿ ಯಾವುದಾದರೂ ಒಂದು ದಾಖಲೆಯನ್ನು ಸೇವಾನುಭವಕ್ಕಾಗಿ ಒದಗಿಸಬೇಕು.

ಅರ್ಹ ಪತ್ರಕರ್ತರು ಉಚಿತ ಬಸ್‌ಪಾಸ್ ಅಡಿ ಜಿಲ್ಲಾ ವ್ಯಾಪ್ತಿಯಲ್ಲಿ ಸಂಚ–ರಿಸುವ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಉಚಿತವಾಗಿ ಸಂಚರಿಸಬಹುದು. ತಹಶೀಲ್ದಾರ–ರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಒದಗಿಸಬೇಕು. ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುವ ವರದಿಗಾರರಿಗೆ ಪ್ರತಿ ತಾಲೂಕಿಗೆ ಸಂಪಾದಕರು ಸೂಚಿಸುವ ಒಬ್ಬ–ರಿಗೆ, ಜಿಲ್ಲಾ ಮಟ್ಟದ ಪತ್ರಿಕೆಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಒಬ್ಬರಿಗೆ, ಆರು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಓರ್ವ ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್‌ಗೆ, ಎಂಟು ಅಥವಾ ಹೆಚ್ಚು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಇಬ್ಬರು ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್‌ಗೆ ಬಸ್ ಪಾಸ್ ಪಡೆಯಲು ಅವಕಾಶವಿದೆ.

ಉಪಗ್ರಹ ಆಧಾರಿತ ವಿದ್ಯುನ್ಮಾನ ವಾಹಿನಿಗಳ ವರದಿಗಾರರು ತಾಲೂಕು ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಪ್ರತಿ ತಾಲೂಕಿಗೆ ಓರ್ವ ಕ್ಯಾಮೆರಾಮ್ಯಾನ್ ಹಾಗೂ ಓರ್ವ ವರದಿಗಾರರು ಬಸ್ ಪಾಸ್ ಪಡೆಯಬಹುದು. ದಿನಪತ್ರಿಕೆಗಳು ಹಾಗೂ ಉಪಗ್ರಹ ಸುದ್ದಿ ವಾಹಿನಿಗಳ ಸಂಪಾದಕರು ನೀಡುವ ನೇಮಕಾತಿ ಪತ್ರ ಹಾಗೂ ಶಿಫಾರಸ್ಸು ಆಧರಿಸಿ ಬಸ್ ಪಾಸ್‌ಗಳನ್ನು ನೀಡಲಾಗುವುದು.

ಅರ್ಹ ಪತ್ರಕರ್ತರು ತಮ್ಮ ಸಮೀಪದ ಗ್ರಾಮ ಒನ್, ಕರ್ನಾಟಕ ಒನ್ ಅಥ–ವಾ ಬೆಂಗಳೂರು ಒನ್ ಕೇಂದ್ರಗಳಿಗೆ ತೆರಳಿ ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸಬಹುದು. ಅಪ್‌ಲೋಡ್ ಮಾಡಿದ ದಾಖಲೆಗಳು ಹಾಗೂ ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ತಮ್ಮ ಜಿಲ್ಲೆಯ ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಗೆ ಸ್ವಯಂ ದೃಢೀಕರಿಸಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

# ನೂತನ ಅಧ್ಯಕ್ಷರ ಅವಿರೋಧ ಆಯ್ಕೆ

ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಬೊಮ್ಮನಹಳ್ಳಿ ಗ್ರಾಮ ಪಂಚಾಯತಿಯ ನಿಕಟಪೂರ್ವ ಅಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ದಿನಾಂಕ 16–1–2025 ರಂದು ನಡೆದ 13 ಸದಸ್ಯರ ಬಲದ ಅಧ್ಯಕ್ಷರ ಚುನಾವಣೆಯಲ್ಲಿ ಸದಸ್ಯೆ ಸರೋಜಾಬಾಯಿ ಮಲ್ಕಣ ಮಸರಕಲ್ ಅವರು ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು, ಆದರೆ ಚುನಾವಣೆ ಅವಧಿ ಮುಗಿಯುವವರೆಗೂ ಬೇರೆ ಯಾರೂ ನಾಮ ಪತ್ರ ಸಲ್ಲಿಸದಿರುವ ಕಾರಣ ಸಮಯ ಮುಕ್ತಾಯ ಆದ ನಂತರ ಚುನಾವಣಾ ಆಧಿಕಾರಿಯಾದ ತಾಲೂಕ ಪಂಚಾಯತ ಇ.ಓ ಮಾನ್ಯ ನಿಂಗಪ್ಪ ಮೊಸಳಿ ಅವರು ಸರೋಜಾಬಾಯಿ ಮಲ್ಕಣ ಮಸರಕಲ್ ಅವರು ಅಧಿಕೃತವಾಗಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು ಎಂದು ಪ್ರಕಟಿಸಿದರು.



ಈ ಸಮಯದಲ್ಲಿ 13 ಸದಸ್ಯರು ಉಪಸ್ಥಿತರಿದ್ದರು. ಚುನಾವಣೆ ಸಹಾಯಕರಾಗಿ ತಾ. ಪಂ. ಮಹಾಂತಗೌಡ ದೊರೆಗೋಳ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರಭು ಬ. ಚನ್ನೂರು, ಪಂ. ಕಾರ್ಯದರ್ಶಿ ಎಚ್.ಜಿ. ಚೌಧರಿ, ಬಿಲ್ ಕಲೆಕ್ಟರ್ ಮುದಿಗೌಡ ಮುಗಳಿ ಮತ್ತು ಅವರ ಸಿಬ್ಬಂದಿ ವರ್ಗ ಹಾಗೂ ಅಪಾರ ಅಭಿಮಾನಿಗಳು ಹಾಜರಿದ್ದರು. ಇದೇ ಸಂದರ್ಭದಲ್ಲಿ ನೂತನ ಗ್ರಾಮ ಪಂಚಾಯತಿ ಅಧ್ಯಕ್ಷೆ ಸರೋಜಾಬಾಯಿ ಅವರ ಪುತ್ರ ಜಗನ್ನಾಥ ಮಲ್ಕಣ ಮಸರಕಲ್ ಅವರು ಸರ್ವ ಸದಸ್ಯ–ರಿಗೆ,ಅಭಿಮಾನಿಗಳಿಗೆ ಧನ್ಯವಾದಗಳನ್ನು ಸಮರ್ಪಿಸಿದರು.

**ವರದಿ– ಸಂಗಮೇಶ ಸಿ ಚೌದ್ರಿ**

# ಶ್ರೀ ಬಾಲ ಲೀಲಾ ಮಹಾಂತ ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ

ದಿ. ಫೆಬ್ರವರಿ 10. 2025 ರಂದು ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲೂಕಿನ ಗೊಜನೂರು ಗ್ರಾಮದ ಶ್ರೀ ಬಾಲ ಲೀಲಾ ಮಹಾಂತ ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಜರುಗಲಿದ್ದು ಫೆಬ್ರವರಿ ಹತ್ತರಂದು ಗಡ್ಡಿ ರಥೋತ್ಸವವು ಜರುಗಲಿದೆ ಸಕಲ ವಾದ್ಯ ವೈಭವಗಳೊಂದಿಗೆ ಉತ್ಸವ ನಡೆಯಲಿದೆ ದಿನಾಂಕ 11 ಫೆಬ್ರುವರಿ 2025 ರಂದು ಕಡುಬಿನಕಾಳ ಜರುಗಲಿದ್ದು ಸಮಸ್ತ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮದ ಭಕ್ತರು ಮಹಾಂತಸ್ವಾಮಿಯ ಕೃಪಾಶೀರ್ವಾದವನ್ನು ಪಡೆಯಬೇಕು ತನು ಮನ ಧನ ಸಹಾಯದೊಂದಿಗೆ ಅಜ್ಜನ ಜಾತ್ರೆಯನ್ನು ವಿಜೃಂಭಣೆಯಿಂದ ನಡೆಸಿ ಕೊಡಬೇಕೆಂದು ಭಕ್ತರಲ್ಲಿ ದೇವಸ್ಥಾನ ಕಮಿಟಿಯಿಂದ ಸವಿನಯ ಪ್ರಾರ್ಥನೆ.



**ವರದಿ : ಸತೀಶ ಗೋಡಿ**

# ಗೊಜನೂರು ಗ್ರಾಮದ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವ



ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲೂಕು ಗೊಜನೂರು ಗ್ರಾಮದಲ್ಲಿ ದಿ. 1–2–2025 ರಿಂದ ದಿ. 4 – 2– 2025 ರ ವರೆಗೆ ದುರ್ಗಾದೇವಿಯ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ನೆರವೇರಲಿದ್ದು ದಿನಾಂಕ 1 ಫೆಬ್ರವರಿ ಶನಿವಾರ ದಿವಸದಂದು ಗೊಜನೂರು ಗ್ರಾಮದ ಗಡಿಗೆ ದುರ್ಗಾದೇವಿಯ ಮೂರ್ತಿಯನ್ನು ತರುವುದು, ದಿ. 2 ಫೆಬ್ರವರಿ ರವಿವಾರದಂದು ಜಾಂಜ್ ಮೇಳ, ಡೊಳ್ಳಿನ ಮೇಳ, ಕಹಳೆಯೊಂದಿಗೆ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ದೇವಸ್ಥಾನ ಪ್ರವೇಶ ಹಾಗೂ ಪೂಜಾರಾಧನೆ, ದಿ. 3 ಫೆಬ್ರವರಿ ಸೋಮವಾರದಂದು ದುರ್ಗಾದೇವಿ ಮೂರ್ತಿಯನ್ನು ಗದ್ದಿಗೊಳಿಸುವುದು ಶ್ರೀಮನ್ ನಿರಂಜನ ಜಗದ್ಗುರು ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಗವಿಮಠ ಕೊಪ್ಪಳ ಸಾನಿಧ್ಯ ವಹಿಸುವರು ಸಾಯಂಕಾಲ ಧರ್ಮಸಭೆ ಹಾಗೂ ಪ್ರತಿಭಾವಂತ ಶಾಲಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜರುಗುವುದು ಹಾಗೂ ನೀಲಗುಂದ ಮತ್ತು ಕುರ್ತಕೋಟಿ ಗ್ರಾಮದ ಕಲಾತಂಡದಿಂದ ಜಾನಪದ ಹಾಗೂ ಸಾಂಸ್ಕೃತಿ–ಕ ಕಾರ್ಯಕ್ರಮ ಜರುಗುವುದು, ದಿನಾಂಕ 4 ಫೆಬ್ರುವರಿ ಮಂಗಳವಾರದಂದು ಶ್ರೀ ದುರ್ಗಾದೇವಿಗೆ ಗ್ರಾಮದ ಭಕ್ತರಿಂದ ಉಡಿ ತುಂಬುವ ಕಾರ್ಯಕ್ರಮ ಜರುಗುವುದು ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಗೊಜನೂರು ಹಾಗೂ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ತನು ಮನ ಧನ ಸಹಾಯದಿಂದ ಭಾಗವಹಿಸಿ ದೇವಿ ಕೃಪೆಗೆ ಪಾತ್ರರಾಗಬೇಕೆಂದು ಸವಿನಯ ಪ್ರಾರ್ಥನೆ.

**ವರದಿ ಸತೀಶ ಗೋಡಿ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 07
ದಿನಾಂಕ: 01-02-2025 ಪುಟಗಳು:16



# ಚೆಲುವ ಕನ್ನಡ



ಸತೀಶ ಗೋಡಿ

ಕನ್ನಡವೆಂದರೆ ಬರಿ ಪದವಲ್ಲ
ಅಪಾರಜ್ಞಾನ ಸುಧೆಯ ಭಂಡಾರ
ಕರ್ನಾಟಕವೆಂದರೆ ಬರಿ ನಾಡಲ್ಲ
ಕೋಟ್ಯಾಂತರ ಜೀವನಾಡಿಗಳ ಆಗರ

ಕನ್ನಡವೆಂದರೆ ಕೇವಲ ನುಡಿಯಲ್ಲ
ಸಂಗೀತ ಸಾಹಿತ್ಯ ಕಲಾ
ರಸಿಕರ ಕುಸುಮ
ಕರ್ನಾಟಕವೆಂದರೆ ಬರಿ
ರಾಜ್ಯವಲ್ಲ
ಶ್ರೀಗಂಧ ಪಾವನ
ತೀರ್ಥಗಳ ಸಂಗಮ

ಕನ್ನಡವೆಂದರೆ ಬರಿ
ಕೋಶವಲ್ಲ
ಜ್ಞಾನಪೀಠ ಪಾರಿತೋಷಕಗಳ ಸಂಭ್ರಮ
ಕರ್ನಾಟಕವೆಂದರೆ ಕೇವಲ ಭೂಪಟವಲ್ಲ
ಕಲ್ಪತರು ದಾನ ದಾಸೋಹಿಗಳ ಉಗಮ

ಕನ್ನಡವೆಂದರೆ ಬರಿ ಉತ್ಸವವಲ್ಲ
ರವಿ ಶಶಿ ತಾರೆಯರ ನಿತ್ಯೋತ್ಸವ
ಕರ್ನಾಟಕವೆಂದರೆ ಬರಿ ತಾಣವಲ್ಲ
ಕಲಿತವರಿಗೆ ಅಮೃತ ನೆನೆದವರಿಗೆ ನೆರಳು

ಕನ್ನಡವೆಂದರೆ ಬರಿ ಸುಂದರ ಕಾವ್ಯವಲ್ಲ
ಸಾವಿರಾರು ವರುಷಗಳ ಇತಿಹಾಸ
ಕರ್ನಾಟಕವೆಂದರೆ ಬರಿ
ನವೆಂಬರ್ ಒಂದಲ್ಲ
ಜೀವ ಗತ ಗತಾನುಕಾಲದ ಮಂದಹಾಸ
ಬೆಳೆಸಿ ಗೌರವಿಸುವುದು ನಮ್ಮ ಕೆಲಸ

# ರಾಮ ಜನ್ಮ ಭೂಮಿ ಪ್ರಯುಕ್ತ ಮಕ್ಕಳಿಂದ ಚಿತ್ರಕಲೆ ಸ್ಪರ್ಧೆ

**ಮೈಸೂರು:** ದಿ.22– 01– 2025 ರಂದು ಬೆಂಗಳೂರಿನಲ್ಲಿ ನಡೆದ ರಾಮ ಜನ್ಮಭೂಮಿ ಮಕ್ಕಳ ರಂಗೋಲಿ ಸ್ಪರ್ಧೆಯಲ್ಲಿ ಶ್ರೀಮತಿ ಶೃತಿ ಬೆಂಗಳೂರು ಅವರ ಚಿತ್ರಕಲೆ ತರಗತಿಯ ಅನೇಕ ಮಕ್ಕಳು ಭಾಗವಹಿಸಿದ್ದರು. ರಂಗೋಲಿ ಸ್ಪರ್ಧೆಗೆ ಶ್ರೀಮತಿ ಶೃತಿಯವರು ಮಕ್ಕಳಿಗೆ ಶ್ರೀ ರಾಮ, ಸೀತೆ, ಲಕ್ಷ್ಮಣ, ಆಂಜನೇಯನ ಕು–ರಿತು ಸ್ಪೂರ್ತಿಯನ್ನು ತುಂಬಿ ರಾಮ ಜನ್ಮ ಭೂಮಿ ಪ್ರಯುಕ್ತ ಜರುಗಲಿರುವ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಲು ಮಕ್ಕಳನ್ನು ತರಬೇತಿ ನೀಡುವ ಮೂಲಕ ಪ್ರೇರೇಪಿಸಿದರು.

**ವರದಿ ಪ್ರದೀಪ್ .ಜೆ.**





# ಕೌಠಾ(ಬಿ.) ಗ್ರಾಮ ಪಂಚಾಯತ್ ನಲ್ಲಿ 76ನೇ ಗಣರಾಜ್ಯೋತ್ಸವ

ಬೀದರ್ ಜಿಲ್ಲೆ ಔರಾದ್ ತಾಲೂಕಿನ ಕೌಠಾ(ಬಿ.) ಗ್ರಾಮ ಪಂಚಾಯತ್ ನಲ್ಲಿ 76ನೇ ಗಣರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು,ಗ್ರಾಮ ಪಂಚಾಯತಿ ಸದಸ್ಯರು, ಆಶಾ ಕಾರ್ಯಕರ್ತೆಯರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಪಂಚಾಯತಿ ಸಿಬ್ಬಂದಿ ವರ್ಗದವರು, ಗ್ರಾಮದ ಹಿರಿಯರು, ಯುವಕರು ಸೇರಿದಂತೆ ಮಹೇಶ್ ಪಾಟೀಲ್ ಶಿವಕುಮಾರ್ ವಗ್ಗೆ, ಜಗನಾಥ್ ಕರಾರ, ಭಾಗವಹಿಸಿದ್ದರು. ಪಂಚಾಯತ್



ಕಾರ್ಯದರ್ಶಿ ಧೂಳಪ್ಪ ಕಾರ್ಯಕ್ರಮವನ್ನು ನಿರ್ವಹಿಸಿದರು.

**ವರದಿ ಸಂಗಮೇಶ್ ಚಿದ್ರೆ**

# ಕೌಠಾ ಬಿ. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆ

ಬೀದರ್ ಜಿಲ್ಲೆ ಔರಾದ್ ತಾಲೂಕು ಕೌಠಾ ಬಿ. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಧ್ವಜಾರೋಹಣವನ್ನು ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರು ಶಿವಕುಮಾರ್ ಶಿಂಧೆ ಇವರು ನೆರವೇರಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಇಂದುಮತಿ ಇವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮ ನಿರೂಪಣೆಯನ್ನು ಶಿಕ್ಷಕಿ ಶ್ರೀಮತಿ ಬಸಮ್ಮ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಕ. ರ. ವೇ ಕಾರ್ಯಕರ್ತರು ಜಗನ್ನಾಥ್ ಹಾಗೂ ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮದ ಗುರು ಹಿರಿಯರು, ಶಿಕ್ಷಕ ವೃಂದ, ಎಸ್ ಡಿ ಎಂ ಸಿ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

**ವರದಿ ಸಂಗಮೇಶ್ ಚಿದ್ರೆ**



# ವಿಜಯ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಸ್ಕೂಲ್ ಬ್ಯಾಗ್ ವಿತರಣಾ ಕಾರ್ಯಕ್ರಮ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಕ್ಕುಂದ ಗ್ರಾಮದಲ್ಲಿ 76 ನೆಯ ಗಣ–ರಾಜ್ಯೋತ್ಸವದ ಅಂಗವಾಗಿ ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಎಂ ಬಿ ಮಹೇಶ್ ಕುಮಾರ್ ಅವರ ಅನುಪಸ್ಥಿತಿಯಲ್ಲಿ ಜನತಾ ಕಾಲೋನಿಯ ಹಿರಿಯ ಪ್ರಾಥ–ಮಿಕ ಶಾಲೆಯಲ್ಲಿ 6 ಮತ್ತು 7ನೇ ತರಗತಿಯ ಮಕ್ಕಳಿಗಾಗಿ ಸ್ಕೂಲ್ ಬ್ಯಾಗ್ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು, ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರಾರ್ಥನಾ ಮತ್ತು ಸ್ವಾಗತ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಆಯೋಜಕರು ಮತ್ತು ಮುಖ್ಯ ಅತಿಥಿಗಳಾಗಿ ಸಮಾಜ ಸೇವಕರಾದ ಶ್ರೀಮತಿ ಲಕ್ಷ್ಮಿ ಸುನಿಲ್ ಬೆಳಗಾವ್ಕರ್ ಅವರು ಭಾಗವಹಿಸಿದ್ದರು.

ಬೆಳಗಾವಿ ಜಿಲ್ಲೆಯ ಕಾರ್ಮಿಕ ಘಟಕದ ಅಧ್ಯಕ್ಷರಾದ ಅರ್ಜುನ್ ಜಕ್ಕಪ್ಪನವರ್, ಉಪಾಧ್ಯಕ್ಷರಾದ ಬಸವರಾಜ ಕೊರಿಕೊಪ್ಪ ಅಸ್ಲಮ್, ಸಿಲ್ಲೆದಾರ್ ಸ್ಮಿತಾ, ಸಾವಿತ್ರಿ ಆಲದಕಟ್ಟೆ ಉಪಸ್ಥಿತರಿದ್ದರು. ಮುಖ್ಯ ಗುರುಗಳಾದ ಬನ್ನೂರ್ ಅವರು ಮಾತನಾಡಿ ತಮ್ಮ ಶಾಲೆಗೆ ಸಹಕಾರ ಕೊಡುತ್ತಿರುವ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಉಪಾಧ್ಯಕ್ಷರುಗಳಿಗೆ ಹಾಗೂ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದರು. ಕಾರ್ಯಕ್ರಮದ ಉದ್ದಕ್ಕೂ ವಿದ್ಯಾರ್ಥಿಗಳ ಭಾಷಣ ಮತ್ತು ನೃತ್ಯ ಮನಸ್ಸಿಗೆ ಮುಟ್ಟುವಂತಿತ್ತು ಸ್ಥಳೀಯರು ಕೂಡಾ ವಿದ್ಯಾರ್ಥಿಗಳನ್ನು ಕೊಂಡಾಡಿದರು.

ಎಸ್ ಡಿ ಎಂ ಸಿ ಅಧ್ಯಕ್ಷರು, ಉಪಾಧ್ಯಕ್ಷರು, ಅಧಿಕಾ–ರಿಗಳು, ಚಾಲಕರು, ಸಹಾಯಕರು ಕೂಡಾ ಭಾಗವಹಿಸಿ ವಿವಿಧ ಬಗೆಯ ಬಿಸಿಯೂಟದ ಅಡುಗೆಯನ್ನು ತಯಾರಿಸಿ ಉಣಬಡಿಸಿದರು. ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಮಹಾಂತೇಶ್ ಮುದಕನಗೌಡರ ಅವರು ಮಾತನಾಡಿ ಒಬ್ಬ ಗೃಹಿಣಿಯಾಗಿ ಸಮಾಜ ಸೇವಕರಾಗಿ ಸರಕಾರಿ ಶಾಲೆಯ ಬಡ ಮಕ್ಕಳಿಗೆ ಶಾಲೆ ಕಾರ್ಯ ಮಾಡುತ್ತಿರುವ ಲಕ್ಷ್ಮಿ ಬೆಳಗಾವಕರ ಅವರ ಕೊಡುಗೆ ಅಮೋಘವಾದದ್ದು ಹಾಗೂ ಮುಖ್ಯ ಗುರುಗಳಾದ ಬನ್ನೂರ್ ಗುರುಗಳು ಎಲ್ಲಾ ಶಾಲೆಯ ಮಕ್ಕಳನ್ನು ತಮ್ಮ ಸ್ವಂತ ಮಕ್ಕಳಂತೆ ಬೆಂಬಲಿಸುವ ರೀತಿ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯ–ರಿಗೆ ಸನ್ಮಾನ ಕೂಡಾ ಏರ್ಪಡಿಸಲಾಗಿತ್ತು. ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸಂಗಪ್ಪ ಬದ್ರಶೆಟ್ಟಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ತಂದು ಶಾಲೆಯ ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು. ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ಗ್ರಾಮ ಘಟಕದ ಮುಖಂಡರಾದಂತ ಸಿದ್ದನಗೌಡ ಸಿದ್ದಮ್ಮನವರ, ಈರಣ್ಣ ಹಳಗುಂಡಿ, ಬಸವರಾಜ್ ಬೆನಕಟ್ಟಿ, ಮೀನಾಕ್ಷಿ ಪಾಟೀಲ್, ಪ್ರದೀಪ ಕರಿಮಕ್ಕನವರ್ ಜೊತೆಗಿದ್ದರು.

ಪ್ರಗತಿಪರ ರೈತರಾದ ಬಸನಗೌಡ ಪಾಟೀಲ್, ಖ್ಯಾತ ಕಲಾವಿದರಾದ ಬಾಬು ಕಂಡೋಜಿ ಮಾತನಾಡಿ ಮಕ್ಕಳು ದೇವರುಗಳಿದ್ದಂತೆ ಶಾಲೆಯ ಗುರುಗಳಿಗೆ ಕೊಡುತ್ತಿರುವ ಎಲ್ಲಾ ಮಕ್ಕಳಿಗೆ ಅನಂತ ಧನ್ಯವಾದಗಳನ್ನು ತಿಳಿಸಿದರು. ಶಿಕ್ಷಕರಾದ ಇಂಗಳಗಿ ಪ್ರಾರ್ಥಿಸಿದರು, ಮಾಧ್ಯಮ ಪ್ರತಿನಿಧಿಯಾದ ಅಪ್ಪಯ್ಯ ಕಂಬಾರ್ ನಿರೂಪಿಸಿದರು. ಅಡಿಯಪ್ಪ ಗಂಗಪ್ಪನವರ್ ಹಾಗೂ ಬಸವ ಹಿತಲಗಡ್ಡಿ ವಂದನಾರ್ಪಣೆ ಮಾಡಿದರು.

**ವರದಿ ಆನಂದ ಎಮ್. ಬಳ್ಳಾರಿ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ಅಧಿಕಾರ ಜವಾಬ್ದಾರಿಯೇ ವಿನಃ ಅಹಂ ಅಲ್ಲ

ಪ್ರಸ್ತುತ ಸಮಾಜದಲ್ಲಿ ಎಲ್ಲಾ ಅಧಿಕಾ-ರಿಗಳು ತನ್ನ ಸ್ಥಾನವನ್ನು ಪ್ರೀತಿಸುತ್ತಾ ಗೌರವಿಸಬೇಕು. ಈ ಸಮಾಜದಲ್ಲಿ ನಾನೊಬ್ಬ ಜವಾಬ್ದಾರಿಯುತ ಅಧಿಕಾರಿ ಎಂಬುದನ್ನು ಮರೆತು ತನ್ನ ಸ್ಥಾನವನ್ನೇ ಗರ್ವದಿಂದ ಬೀಗಿಕೊಂಡು ಅಧಿಕಾರವನ್ನು ಅವರವರ ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಸರಿಯಲ್ಲ. ಈ ಸಮಾಜದಲ್ಲಿ ಇಂತಹ ಅಧಿಕಾರಿಗಳೇ ಎಲ್ಲೆಲ್ಲಿಯೂ ತುಂಬಿ ತುಳುಕುತ್ತಿದ್ದಾರೆ. ಪ್ರಾಮಾಣಿಕತೆಯಿಂದ ಅಧಿಕಾರವನ್ನು ಸಮರ್ಪಕವಾಗಿ ನಿರ್ವಹಿಸುವವರು ಬೆರಳೆಣಿಕೆಯಷ್ಟು ಜನರು ಮಾತ್ರ.





ಒಂದು ಕಚೇರಿಯ ಮುಂದೆ ಅಥವಾ ಒಬ್ಬ ಅಧಿಕಾರಿಯ ಮುಂದೆ ಯಾವುದೇ ವ್ಯಕ್ತಿ ಹೋಗಿ ನಿಂತಿ-ದ್ದಾನೆ ಎಂದರೆ ಅವನಿಗೆ ಸಹಿಸಲಾಗದ ಸಮಸ್ಯೆಯಾಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದೆ ಅಧಿಕಾರಿಗಳು ತಮ್ಮ ದರ್ಪವನ್ನು ಪ್ರದರ್ಶಿಸುವುದು ಎಷ್ಟರ ಮಟ್ಟಿಗೆ ಸರಿ. ಒಬ್ಬ ವಿದ್ಯಾರ್ಥಿ ತರಗತಿಗೆ ಹೋಗದೆ ಅಧಿಕಾರಿಗಳಿಗೆ ದೂರು ಸಲ್ಲಿಸಲು ಹೋಗಿದ್ದಾಗ, ಒಬ್ಬ ರೈತ ತನ್ನ ಎಲ್ಲಾ ಕೆಲಸ ಕಾರ್ಯಗಳನ್ನು ಬಿಟ್ಟು ಕಛೇ-ರಿಯ ಮುಂದೆ ಬಂದು ನಿಂತಿದ್ದಾಗ, ಒಬ್ಬ ಹೆಂಗಸು ಅಧಿಕಾರಿಗಳನ್ನು ಕಾಣಲೆಂದು ಕಾಯುತ್ತಿದ್ದಾಗ, ಪ್ರತಿದಿನ ಕೆಲಸಕ್ಕೆ ಹೋಗುತ್ತಿರುವ ವ್ಯಕ್ತಿ, ಕೆಲಸಕ್ಕೆ ಹೋಗದೆ ಅಧಿಕಾರಿಗಳನ್ನು ಭೇಟಿಯಾಗಲು ಬಂದಾಗ ಅಥವಾ ಯಾರೇ ನಿಮ್ಮ ಬಳಿ ಬಂದಾಗ ಮಹಾನೀಯ ಅಧಿಕಾರಿಗಳೇ ನಿಮ್ಮ ಅಹಂ ಬದಿಗಿಟ್ಟು ಅವರ ಸಮಸ್ಯೆಗಳಿಗೆ ಸ್ಪಂದಿಸಿ.

ದೂರು ಸಲ್ಲಿಸಲು ಬಂದವರು ನೀಡುವ ಹೇಳಿಕೆಯಾಗಲಿ, ಪತ್ರಗಳನ್ನಾಗಲಿ ನಿರ್ಲಕ್ಷಿಸಬೇಡಿ, ಅವರು ನಿಮ್ಮ ಮೇಲೆ ಭರವಸೆ ಇಟ್ಟು ಬಂದಿರುತ್ತಾರೆ. ಅವರ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂಬ ನಂಬಿಕೆಯನ್ನು ಸುಳ್ಳು ಮಾಡಬೇಡಿ ಅಧಿಕಾರವಿದೆ ಎಂಬ ಗರ್ವದಿಂದ ಮಾನವೀಯತೆಯನ್ನು ಮರೆಯಬೇಡಿ, ನಾನು ಅಧಿಕಾರಿ ನಾನು ಹೇಳಿದಂತೆ ಆಗಬೇಕೆಂದು ನೈತಿಕತೆಯನ್ನು ಮೀರಬೇಡಿ ಉತ್ತಮ ಸಮಾಜದ ನಿರ್ಮಾಣದಲ್ಲಿ ನಿಮ್ಮ ಪಾತ್ರ ಅಪಾರವಾದದ್ದಾಗಿದೆ ಅಧಿಕಾರ ಎನ್ನುವುದು ಜವಾಬ್ದಾರಿಯೇ ವಿನಃ ಅಹಂ ಅಲ್ಲ ನೆನಪಿರಲಿ.

**– ರಾಮಕೃಷ್ಣ .ಎನ್., ಯುವ ಸಾಹಿತಿ**

# ಆಶೀರ್ವಾದ





**ಅನುರಾಧ ಡಿ. ಸನ್ನಿ**

ಕರುಣಿಸುವೆ ತಂದೆ
ನಿನ್ನ ಚರಣಕ್ಕೆ ಶಿರಬಾಗುವೆ
ಪಿತೃ ಮಾತೃದೇವೋಭವ
ವಿದ್ಯಾಸರಸ್ವತಿ ನಮೋಸ್ತುತೆ

ಜ್ಞಾನದ ಬೆಳೆ ಬಿತ್ತು ಪ್ರೀತಿಯ
ಕಣ್ಣರೆಸು ಎನ್ನ ಬದುಕಿಗೆ
ಅಧರ್ಮ ಕಳೆದ ಧರ್ಮವ ಕಲ್ಪಿಸು
ಬದುಕಿನ ದಾರಿಗೆ
ಸುಜ್ಞಾನ ತುಂಬಲು ಪ್ರೇರೇಪಿಸು

ನ್ಯಾಯ ನೀತಿ ಸತ್ಯ ಶಾಂತಿಯ
ಸರಳ ಮೂರ್ತಿ ನನ್ನ ತಂದೆಗೆ
ನನ್ನ ಸಮರ್ಪನ ಭಾವ ಸ್ವೀಕರಿಸು
ಮುಂಬರುವ ಬದುಕಿಗೆ

ಸಲಹೆ ನೀಡುವೆನು ತಂದೆ ಬೇಡುವೆನು
ನಿನ್ನಯ ಅಂತರಾತ್ಮಕ್ಕೆ
ಕರುಣಿಸು ನಿನ್ನ ಆಶೀರ್ವಾದ
ನನ್ನದೆನ್ನುವ ತನು ಮನ ಧನವ
ಸಂಪೂರ್ಣ ಅರ್ಪಿಸುವೆ ನಿನ್ನ
ಪಾದಕಮಲಗಳಿಗೆ "ಅಪ್ಪ"

# "ಮಾನ್ಯ ಖರ್ಗೆ ಸಾಹೇಬ್ರೆ ...




**70 ವರ್ಷದಿಂದ ಅವರು ಏನು ಮಾಡಿದರಂತೆ ಎಲ್ಲರಿಗೂ ಗೊತ್ತು ಕಿತ್ತೂರು ರಾಣಿ ಚೆನ್ನಮ್ಮ, ಕರ್ನಾಟಕದ ಹೆಣ್ಮಕ್ಕಳಾದ ಪೊಲೀಸರು, ಅಂಗನವಾಡಿ ಕಾರ್ಯಕರ್ತರು, ಪೌರಕಾರ್ಮಿಕರು ಮತ್ತು ನಮ್ಮೆಲ್ಲರ ಮನೆ ಹೆಣ್ಣು ಮಕ್ಕಳು. ಆದರೆ ನಿಮ್ಮ ಹಿರಿತನವು ಇಟಲಿ ಪ್ರಜೆ ನಾ ಕಿತ್ತೂರಾಣಿ ಚೆನ್ನಮ್ಮ ಅಂತ ನೀಡುವ ನಿಮ್ಮ ಹೇಳಿಕೆ ಎಷ್ಟರ ಮಟ್ಟಿಗೆ ಸರಿ..."**

**ಕಿರಣ್ ನಾಯ್ಡು,** ಬಿ ಜೆ ಪಿ ಜಿಲ್ಲಾ ಯುವ ಮೋರ್ಚಾ ಸೆಕ್ರೆಟರಿ, ಮೈಸೂರು.

–ವರದಿ ಪ್ರದೀಪ್ .ಜೆ.

# ರಾಯಬಾಗ ಹಳೇ ವೈಷಮ್ಯಕ್ಕೆ ಕೊಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು




**ಬೆಳಗಾವಿ/ರಾಯಬಾಗ:** ಹಳೇ ವೈಷಮ್ಯದ ಹಿನ್ನಲೆಯಲ್ಲಿ ವಾಹನ ಡಿಕ್ಕಿ ಹೊಡೆಸಿ ಯುವಕನೋರ್ವನ ಕೊಲೆ ಮಾಡಿದ ಆರೋಪದಲ್ಲಿ ರಾಯಬಾಗ ಠಾಣೆಯ ಪೊಲೀಸರು ಒಟ್ಟು ಎಂಟು ಜನರ ವಿರುದ್ಧ ದಿ.29.01.2025 ರ ಬುಧವಾರ ಪ್ರಕರಣ ದಾಖಲಿಸಿದ್ದಾರೆ. ಮಹಾರಾಷ್ಟ್ರ ಮೀರಜ್ ನ ಅರೀಫ್ ಇಬ್ರಾಹಿಂ ಚೌಧರಿ, ಜುಬೀರ ಚೌಧರಿ, ರಾಜು ಅಲ್ಲಾಭಕ್ಷ ಪಟೇಲ, ಸೋಹೆಲ್ ಪಾತ್ರೋಟ, ಸಂ-ಜಯ ಕಾಂಬಳೆ, ಅಭಿದಾ ಜಮಾದಾರ ಹಾಗೂ ಇಲಿಯಾಸ್ ಶೇಖ್ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಘಟನೆಯಲ್ಲಿ ಮಿರಜ್ ನ ಸಮೀರ ಖಾಜಾ ಶೇಖ ಸಾವನ್ನಪ್ಪಿದ್ದು, ಫಿರೋಜ್ ಮುಸ್ತಾಕ ರೋಹಿಲೆ ಗಾಯಗೊಂಡಿದ್ದಾನೆ.

**ವರದಿ : ಸಂಗಮೇಶ ಕಾಂಬಳೆ**

# ಯಶಸ್ವಿಯಾಗಿ ಜರುಗಿದ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಜಯಂತೋತ್ಸವ



ಕಲಬುರ್ಗಿ ಜಿಲ್ಲೆ ಯಡ್ರಾಮಿ ತಾಲೂಕಿನ ಕಾಚಾಪುರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಹಾಗೂ ಹಿರಿಯ ಪ್ರಾಥಮಿಕ ಶಾಲೆ ಹಾಗೂ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಯುವಕ ಸಂಘ ಹಾಗೂ ತಾಲೂಕಿನ ಎಲ್ಲಾ ಸರಕಾರಿ ಕಚೇರಿಗಳಲ್ಲಿ ಯಶಸ್ವಿಯಾಗಿ ಜರುಗಿಸಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜದ ಬಂಧುಗಳು, ಊರ ಪ್ರಮುಖರು, ಪಂಚಾಯತಿ ಅಧಿಕಾರಿಗಳು, ಸಿಬ್ಬಂದಿಗಳು, ಶಾಲಾ ಶಿಕ್ಷಕರು, ಶಾಲೆಯ ಮಕ್ಕಳು ಹಿರಿಯ ನಾಗರಿಕರು ಸೇರಿ ಯಶಸ್ವಿಯಾಗಿ ನೆರವೇ-ರಿಸಿದರು.

**ವರದಿಗಾರರು ತಿಪ್ಪಣ್ಣ ಜಾಲಹಳ್ಳಿ**

# ರಾಯಬಾಗ: ಯೋಧನ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಶಾಸಕ ಐಹೊಳೆ



ವೀರ ಮರಣಹೊಂದಿದ ಬೆಳಗಾವಿ ಜಿಲ್ಲೆಯ ರಾಯಬಾಗ ವಿಧಾನಸಭಾ ಕ್ಷೇತ್ರದ ಬೂದಿಹಾಳ ಗ್ರಾಮದ ವೀರಯೋಧ ಶ್ರೀ ಯಲ್ಲಪ್ಪ ಹಂಜಾನಟ್ಟಿ ಅವರ ಮನೆಗೆ ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಅವರು ಭೇಟಿ ನೀಡಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದುಕೊಂಡರು, ಬಳಿಕ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು ಕಾರ್ಯಕರ್ತರು ಹಾಗೂ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

**ವರದಿ :ಸಂಗಮೇಶ ಕಾಂಬಳೆ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ರಸ್ತೆ ನಿರ್ಮಿಸಿ ಕೊಡುವ ಕುರಿತು ಮನವಿ ಪತ್ರ ಸಲ್ಲಿಕೆ



ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಶಿರವಾಳ ಸೀಮಾಂತರದ ಕೆರೆ ಒಡ್ಡಿನಿಂದ ಸ.ನಂ. 87/5ರವರೆಗೆ ರೈತರಿಗೆ ತಮ್ಮ ತಮ್ಮ ಜಮೀನುಗಳಿಗೆ ಹೋಗಲು ರಸ್ತೆ ಇರದ ಕಾರಣ ರಸ್ತೆ ನಿರ್ಮಿಸಿ ಕೊಡುವ ಕುರಿತು ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ ವಾಸುದೇವ ಮೇಟಿ ಬಣ) ಜಿಲ್ಲಾ ಅಧ್ಯಕ್ಷರು ಮಲ್ಲನಗೌಡ ಹಗರಟಗಿ, ತಾಲೂಕಾ ಅಧ್ಯಕ್ಷರಾದ ಶ್ರೀ ದೇವಿಂದ್ರಪ್ಪ ಕೋಲ್ಕಾರ ಸಾ॥ ಶಿರವಾಳ ಇವರು ಸನ್ಮಾನ್ಯ ಶ್ರೀ ಶರಣಬಸಪ್ಪಗೌಡ ದರ್ಶನಾಪೂರ ರವರು ಸಣ್ಣ ಕೈಗಾರಿಕೆ ಹಾಗೂ ಯುವ ಉದ್ದಿಮೆ ಸಚಿವರು ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಇವರಿಗೆ ಮನವಿ ಪತ್ರ ಸಲ್ಲಿಸಿದರು.

ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಶಹಾಪೂರ ಹೋಬಳಿಯಲ್ಲಿ ಬರುವ ಶಿರವಾಳ ಸೀಮಾಂತರದ ಕೆರೆ ಒಡ್ಡಿನಿಂದ ಸ.ನಂ. 87/5 ರವರೆಗೆ ಅಂ–ದರೆ ಈ ಪ್ರದೇಶದಲ್ಲಿ ಸುಮಾರು 100 ಎಕರೆ ಇರುವ ಜಮೀನುಗಳಿಗೆ ಆಯಾ ಜಮೀನಿನ ರೈತರಿಗೆ ಹಾಗೂ ಎತ್ತಿನಗಾಡಿ, ಟ್ರ್ಯಾಕ್ಟರ್ ಹೋಗಲು ದಾರಿ ಇರುವುದಿಲ್ಲ ಕಾರಣ ತಮ್ಮ ಸಚಿವರ ಹಾಗೂ ಶಾಸಕರ ಅನುದಾನದಲ್ಲಿ ಅಥವಾ ಯಾವುದಾದರೂ ಇಲಾಖೆಯ ವತಿಯಿಂದ ಈ ಮಾರ್ಗ ಮಧ್ಯ ಅಚ್ಚುಕಟ್ಟಾದ ರಸ್ತೆಯನ್ನು ನಿರ್ಮಾಣ ಮಾಡಿಕೊಡಬೇಕೆಂದು ಗ್ರಾಮದ ರೈತರ ಪರವಾಗಿ ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ ವಾಸುದೇವ ಮೇಟಿ ಬಣ) ತಾಲೂಕಾ ಅಧ್ಯಕ್ಷರಾದ ತಾಲೂಕಾ ಅಧ್ಯಕ್ಷರಾದ ಶ್ರೀ ದೇವಿಂದ್ರಪ್ಪ ಕೋಲ್ಕಾರ ಮನವಿ ಪತ್ರದ ಮೂಲಕ ಕೋರಿದರು.

**ವರದಿ – ಚೇತನ ಹಿರೇಮಠ**

# ಜನಮನ ಗೆದ್ದ ಅಧಿಕಾರಿಗಳು

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಹಾಗೂ ಕಿತ್ತೂರ ತಾಲೂಕಿನ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದಂತ ಶ್ರೀಕಿರಣ್ ಘೋರ್ಪಡೇ ಹಾಗೂ ಬೈಲಹೊಂಗಲ ತಾಲೂಕಾ ಪಂಚಾಯಿತಿಯ ಸಹಾಯಕ ನಿರ್ದೇಶಕರಾದ ಶ್ರೀ ಬಿ ಎನ್ ರಘು ಮತ್ತು ಸಹಾಯಕ ನಿರ್ದೇಶಕರು ನರೇಗಾ ವಿಜಯಕುಮಾರಗೌಡ ಐ ಪಾಟೀಲ್ ಅವರು ಸರ್ಕಾರದ ಸೇವೆಯಲ್ಲಿ ಬೈಲಹೊಂಗಲ ತಾಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯಿತಿ ಹಾಗೂ ಸಾರ್ವಜನಿಕರ ಯಾವುದೇ ಕೆಲಸಕ್ಕೆ ತುಂಬಾ ಬೇಗ ಸ್ಪಂದನೆ ನೀಡುತ್ತಿದ್ದು ಸಾರ್ವಜನಿಕರು ಸಮಸ್ಯೆಗಳನ್ನು ಹೊತ್ತುಕೊಂಡು ಬಂದಾಗ ಯಾರನ್ನೂ ಕಾಯಿಸದೆ ಅವರಿವರನ್ನದೇ ಕೈಯಲ್ಲಿರುವ ಕೆಲಸವನ್ನು ಬದಿಗೊತ್ತಿ ಸಾರ್ವಜನಿಕರ ಆ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಸಾರ್ವಜನಿಕರ ಮೆಚ್ಚುಗೆ, ಪ್ರೀತಿಗೆ ಪಾತ್ರರಾಗಿದ್ದಾರೆ.




ಶ್ರೀ ಕಿರಣ್ ಘೋರ್ಪಡೆ | ಶ್ರೀ ಬಿ ಎನ್ ರಘು | ಶ್ರೀ ವಿಜಯ್ ಕುಮಾರ್ ಗೌಡ ಐ. ಪಾಟೀಲ್

**ವರದಿ ಮಂಜು .ಎಮ್. ಚಿಕ್ಕಣ್ಣನವರ**

**ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಹಾಗೂ ಕಿತ್ತೂರು ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಕಿರಣ್ ಘೋರ್ಪಡೆ ಹಾಗೂ ನರೇಗಾ ಸಹಾಯಕ ನಿರ್ದೇಶಕರಾದ ಶ್ರೀ ವಿ ಐ ಪಾಟೀಲ್ ಹಾಗೂ ಅಕೌಂಟ್ ಆಫೀಸರ್ ಪಿ.ಎಸ್. ಹಿರೇಮಠ ಮತ್ತು ವ್ಯವಸ್ಥಾಪಕರಾದ ಎ ಎನ್ ಮಿರ್ಜಿ ಹಾಗೂ ಎಫ್ ಡಿ ಎ ಮಾಂತೇಶ್ ಭಜಂತ್ರಿ ಅವರಿಂದ ಕರುನಾಡ ಕಂದ ಕ್ಯಾಲೆಂಡರ್ ಬಿಡುಗಡೆಗೊಳಿಸಿದ ಸಂದರ್ಭ.**



# 2001–2002 ನೇ ಸಾಲಿನ ಪಿಯುಸಿ ಹಳೆ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ





ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕಾನಮಡಗು ಗ್ರಾಮದಲ್ಲಿ ಶ್ರೀ ಸಿದ್ದಲಿಂಗೇಶ್ವರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ದಿ.20–1–2025 ರ ಸೋಮವಾರದಂದು 2001 – 2002 ನೇ ಸಾಲಿನ ಪಿ.ಯು.ಸಿ ಹಳೆ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರು ವಂದನಾ ಕಾರ್ಯಕ್ರಮವನ್ನು ಉದ್ದೇಶಿಸಿ ತಂದೆ ತಾಯಿ, ಗುರುಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಗುರುಗಳು ಮಾರ್ಗದರ್ಶನ ಶಿಕ್ಷಣವನ್ನು ಜೀವನದ ಪಾಠ ಕಲಿಸುವಂತಹ ಹಲವಾರು ವಿಷಯಗಳನ್ನು ಅವರು ರೂಪಿಸಿಕೊಟ್ಟಿರುತ್ತಾರೆ ತಂದೆ ತಾಯಿಯರು ಜೀವನದ ಮೌಲ್ಯಗಳ ಪಾಠವನ್ನು ಕಲಿಸಿದರೆ ಗುರುಗಳು ಮುಂದಿನ ಭವಿಷ್ಯದ ಬಗ್ಗೆ ಹಾಗೂ ಜೀವನದ ಅಂಶಗಳು ಹಾಗೂ ತಿದ್ದಿ–ತೀಡುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಾರೆ ಅಂತಹ ಗುರುಗಳಿಗೆ ಒಂದು ಭಾವನಾತ್ಮಕ ಸಂಬಂಧನೇ ಈ ಕಾರ್ಯಕ್ರಮ ಸಾಕ್ಷಿ ಆಗಬೇಕು ಹೇಳಬಹುದು ಎಷ್ಟೋ ಗುರುಗಳಿಗೆ ಈ ಕಾರ್ಯಕ್ರಮ ತುಂಬಾ ಉನ್ನತ ಹಾಗೂ ಭಾವನಾತ್ಮಕ ಸಂಬಂಧವನ್ನು ಪ್ರೇರೇಪಿಸಲಾಯಿತು ಸಾಕ್ಷಿಯಾಗಿದೆ, ಶಿಕ್ಷಣ ಜೊತೆ ಸಂಸ್ಕಾರವನ್ನು ಕಲಿಸುವಂತಹ ಶಿಕ್ಷಕರಿಗೆ ಹಾಗೂ ಯಾವ ಸನ್ಮಾನ ಮಾಡಿದರೂ ಅವರಿಗೆ ಸಾಲದು ಜೀವನದ ಮೌಲ್ಯವನ್ನೇ ತಿದ್ದುವಂತಹ ಶಿಕ್ಷಕರ ಕೆಲಸ ಆಗಿರುತ್ತೆ ಅಂತಹ ಶಿಕ್ಷಕರಿಗೆ ವಿದ್ಯಾರ್ಥಿಗಳು ಒಂದು ಚಿಕ್ಕ ಅಳಿಲು ಸೇವೆ ಮಾಡಲು ಈ ಕಾರ್ಯಕ್ರಮ ಸಾಕ್ಷಿ ಆಗಲಿದೆ ,ಸಿದ್ದಲಿಂಗೇಶ್ವರ ಸಮನ್ವಯ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಸವರಾಜಪ್ಪ ಸರ್ ಅವರು ಪುಸ್ತಕದ ಸೀಮಿತವಾಗಿರುವುದಿಲ್ಲ ವಿದ್ಯಾರ್ಥಿಗಳ ಜೀವನದ ಏರುಪೇರುಗಳಿಗೆ ಸಹ ಸಾಕ್ಷಿಯಾಗಿರುತ್ತಾನೆ ಮನೆಯಲ್ಲಿ ತಂದೆ ತಾಯಿ ಬುದ್ದಿ ಹೇಳುವಷ್ಟು, ನಂತರ ಸ್ಥಾನವನ್ನು ತುಂಬಲು ಗುರು ಸಾಕ್ಷಿಯಾಗುತ್ತಾನೆ ಅದನ್ನು ಅರಿತು ಬಾಳಿದವರು ಆಕಾಶವನ್ನೇ ಮುಟ್ಟಿ ಬರುವಷ್ಟು ಎತ್ತರ ಮಟ್ಟಕ್ಕೆ ಬೆಳೆಯುತ್ತಾರೆ ಗುರುವಿಲ್ಲದೆ ಯಾವ ವ್ಯಕ್ತಿಯೂ ಸಾಧನೆಯು ಅಸಾಧ್ಯ ಎನ್ನಬಹುದು ಜೀವನದಲ್ಲಿ ತಂದೆ ತಾಯಿ ಗುರುವಾದರೇ ಶಿಕ್ಷಣದ ಮೌಲ್ಯವನ್ನು ಪ್ರೇರೇಪಿಸುವ ಶಿಕ್ಷಕನಾಗುತ್ತಾನೆ ಅಂತಹ ಗುರು ಮತ್ತು ಶಿಷ್ಯರ ಮಧ್ಯೆ ಅಪರವಾದಂತಹ ಸಂಬಂಧವನ್ನು ಹೊಂದಿರುತ್ತಾರೆ ಎಂದು ಹಳೆಯ ವಿದ್ಯಾರ್ಥಿಗಳು ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಗುರುವಂದನಾ ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ತಮ್ಮ ಗುರುಗಳನ್ನು ಟ್ರ್ಯಾಕ್ಟರ್ ನಲ್ಲಿ ಸಕಲ ವಾದ್ಯಗಳೊಂದಿಗೆ ಮೆರವಣಿಗೆಯ ಮೂಲಕ ಕರೆ ತರಲಾಯಿತು. ಆ ದಿನ ಕಾನಮಡಗು ಗ್ರಾಮದಲ್ಲಿ ಹಬ್ಬದ ವಾತಾವರಣ ತುಂಬಿತ್ತು ಎಂದು ಹೇಳಬಹುದು.

ತಮ್ಮ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾ ಸಂತಸವನ್ನು ಹಂಚಿಕೊಂಡರು 2001ನೇ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಕು–ರಿತು ಆ ದಿನಗಳ ನೆನಪುಗಳನ್ನು ಸ್ಮರಿಸುತ್ತಾ ಆ ವೇದಿಕೆಗೆ ಒಂದು ಸಂತಸದ ವಾತಾವರಣವನ್ನು ತುಂಬಿಸಿದರು ಗುರು ವಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿದ್ಧಲಿಂಗೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ನಾಗಲಿಂಗಪ್ಪ ಅವರು ಮಾತನಾಡುತ್ತಾ ಗುರು ಶಿಷ್ಯರ ಸಂಬಂಧ ಜನ್ಮ ಜನ್ಮದ ಅನುಬಂಧ ಎಂದೆಂದೂ ಮರೆಯಲಾಗದ ಈ ಬಂಧ ಶಿಷ್ಯರ ಸಂಬಂಧ ಶಿಷ್ಯ ಮತ್ತು ಗುರುವಿನ ನಡುವೆ ಸಂಬಂಧವನ್ನೇ ರೂಪಿಸಿ ಆ ಸಂಬಂಧಕ್ಕೆ ಜೀವನ ತುಂಬುವಂತಹ ಮಾತುಗಳನ್ನು ತನ್ನ ಹೃದಯಾಳದಿಂದ ಮಾತುಗಳಲ್ಲಿ ಹೊರ ಹಾಕಿದರು, ಸಮಾಜ–ಕ್ಕೆ ಉತ್ತಮ ನಾಗರಿಕರನಾಗಿ ತಪ್ಪು ಒಪ್ಪುಗಳನ್ನು ತಿದ್ದಿ ವಿದ್ಯಾರ್ಥಿಗಳು ಕಲ್ಲಿನಂತೆ ಇದ್ದರು ಅವರನ್ನು ಒಂದು ಸುಂದರ ಶಿಲ್ಪಿಯನ್ನಾಗಿ ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಾರೆ ಅಂತಹ ಗುರು ಶಿಷ್ಯರ ಮಧ್ಯೆ ಸಂಬಂಧವನ್ನು ಎಂದಿಗೂ ಮರೆಯಲಾಗದು ಎಂದರು.

ಕಾರ್ಯಕ್ರಮದ ಪ್ರಾರ್ಥನೆ ರೈತ ಗೀತೆಯೊಂದಿಗೆ ಹಂಸಗಾನ ಕಲಾಬಳಗದ ಗಂಗಾಧರ್ ದಿನೇಶ್ ರವ–ರಿಂದ ನಡೆಯಿತು, ನಾಗೇಶ್ ಶಿಕ್ಷಕರು ಸ್ವಾಗತ ಭಾಷಣವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು, ದಿನೇಶ್ ಬಿ ಚಿತ್ರದುರ್ಗ ಪ್ರಾಸ್ತಾವಿಕ ನುಡಿ, ಹಾಗೂ ಆಶಯ ನುಡಿಗಳನ್ನು ಶ್ರೀಮತಿ ಮಂಜುಳಾ ಬಿ ಎಂ ಕನ್ನಡ ಉಪನ್ಯಾಸಕರು ನೆರವೇ–ರಿಸಿಕೊಟ್ಟರು. ಡಾಕ್ಟರ್ ಕೆ ಸಿ ಶರಣಪ್ಪ, ಎ ಎಸ್, ಬಿ ಎಂ ಮಂಜುಳಾ, ಮಹಾಂತೇಶ್, ಜಿ ಬಿ ನಾಗರಾಜ್, ಎಚ್ ಮ್ ರಾಜೇಂದ್ರ, ಗಿರಿಜಮ್ಮ, ಪ್ರಕಾಶ್, ಸ ಹಿ ಪ್ರಾ ಶಾಲೆಯ ಮುಖ್ಯ ಶಿಕ್ಷಕ ಶೇಖರಪ್ಪ, ಪ್ರೌಢಶಾಲೆ ದೈಹಿಕ ಶಿಕ್ಷಣ ಶಿಕ್ಷಕ ಶ್ರೀನಿವಾಸ್, ಶಫೀವುಲ್ಲಾ (ಕವಿ), ಚಿದಾನಂದಪ್ಪ, ಕಾಲೇಜ್ ಉಪನ್ಯಾಸಕರು, ಸಿಬ್ಬಂದಿ ಹಳೆ ವಿದ್ಯಾರ್ಥಿಗಳಾದ ವನಜಾಕ್ಷಿ, ತಿಪ್ಪೇಸ್ವಾಮಿ, ನಾಗೇಶ್, ಇನ್ನೂ ಮುಂತಾದ ಹಳೆ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಊರಿನ ಪ್ರಮುಖ ಮುಖಂಡರು ಹಾಗೂ ಅಲ್ಲಿನ ಗ್ರಾಮಸ್ಥರು ಅದ್ದೂರಿಯಾಗಿ ಕಾರ್ಯಕ್ರಮವನ್ನು ನೆರವೇ–ರಿಸಿಕೊಟ್ಟರು.

**ವರದಿ : ಗುರುರಾಜ ಎಲ್, ಕಲ್ಲಹಳ್ಳಿ ಟಿ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 07
ದಿನಾಂಕ: 01–02–2025 ಪುಟಗಳು:16

# ಸಾಧನೆ ಶಿಕ್ಷಣದಿಂದ ಮಾತ್ರ ಸಾಧ್ಯ – ಪರಿಶಿಷ್ಟ ವರ್ಗಗಳ ಅಧಿಕಾರಿ ರಾಜೇಶ್



**ಚಾಮರಾಜನಗರ/ ಹನೂರು:** ಭೀಮ್ ಸೇನಾ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಹನೂರು ತಾಲ್ಲೂಕು ಶಾಖೆ ವತಿಯಿಂದ ಸಾವಿತ್ರಿ ಬಾಯಿ ಪುಲೆ ಜಯಂತಿ ಕಾರ್ಯಕ್ರಮ ಹಾಗೂ 207 ನೇ ಭೀಮಾ ಕೋರೇಗಾಂವ್ ವಿಜಯೋತ್ಸವ ಹಾಗೂ 76ನೇ ಗಣ–ರಾಜ್ಯೋತ್ಸವ ಕಾರ್ಯಕ್ರಮವನ್ನು ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಾತನಾಡಿ ಸಾವಿತ್ರಿ ಬಾ ಪುಲೆ ಜಯಂತಿ, 207 ಭೀಮಾ ಕೋರೆಗಾಂವ್, ಮತ್ತು 76 ನೇ ಗಣರಾಜ್ಯೋತ್ಸವ ಈ ಮೂರು ಕಾರ್ಯಕ್ರಮಗಳ ಆಶಯಗಳನ್ನು ನಾವು ಕಡ್ಡಾಯವಾಗಿ ತಿಳಿದುಕೊಳ್ಳಬೇಕಾಗಿದೆ

ಸಾವಿತ್ರಿ ಬಾಯಿ ಪುಲೆ ಶಿಕ್ಷಣ ಕ್ರಾಂತಿ ಮೂಲಕ ಮಹಿಳೆಯರಿಗೆ ಶಿಕ್ಷಣ ನೀಡಿದರು. ಪ್ರಾಚೀನ ಕಾಲದಿಂದಲೂ ಮಹಿಳೆಯರು ಎಲ್ಲಾ ರಂಗದಲ್ಲಿಯೂ ಕಡೆ ಗಣಿಸಿದರು ಆದರೆ ಮಹಾರಾಷ್ಟ್ರದ ಜ್ಯೋತಿ ಬಾ ಪುಲೆ ಮತ್ತು ಸಾವಿತ್ರಿ ಬಾ ಪುಲೆ ಆದರ್ಶ ದಂಪತಿಗಳು ಶೋಷಿತ ವರ್ಗಗಳಿಗೆ ಶಿಕ್ಷಣ ನೀಡಿ ಅಕ್ಷರ ಕ್ರಾಂತಿಯನ್ನು ಮಾಡಿದರು ಇವರ ಚಳುವಳಿಯಲ್ಲಿ ಮುನ್ನಡೆಸಿದವರು ಡಾ ಬಿ ಆರ್ ಅಂಬೇಡ್ಕರ್ ರವರು ಅದಕ್ಕೆ ಸಂವಿಧಾನದಲ್ಲಿ ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆಯಬೇಕು ಹಾಗೂ ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದೆ ಬರಬೇಕು ಎಂದು ತಿಳಿಸಿದರು. ಶೋಷಿತ ಮಹಿಳೆಯರು ಏನಾದರೂ ಇಂದು ಸಾಧನೆ ಮಾಡಿರುವುದಕ್ಕೆ ಕಾರಣ ಸಾವಿತ್ರಿ ಬಾಯಿ ಪುಲೆ, ಶಿಕ್ಷಣವೆಂಬುವುದು ಹುಲಿ ಹಾಲಿದ್ದಂತೆ ಅದನ್ನು ಕುಡಿದರೆ ಹುಲಿಯಂತೆ ಘರ್ಜಿಸಬಹುದು. ಜಿಲ್ಲೆಯ ಹಾಡಿಗಳಲ್ಲಿ ಇಂದಿಗೂ ಕೂಡಾ ಬಾಲ್ಯವಿವಾಹ, ಪೋಕ್ಸೊ ಅಂತಹ ಘಟನೆಗಳು ನಡೆಯುತ್ತದೆ ಇದಕ್ಕೆ ಕಾರಣ ಶಿಕ್ಷಣದ ಅರಿವು ಇಲ್ಲದೇ ಇರುವುದು ಎಷ್ಟೋ ಕುಟುಂಬಗಳು ಕುಡಿತದಿಂದ ನಾಶವಾಗಿದೆ ಎಂದರು. ಸಹ ಶಿಕ್ಷಕ ರಾಜ್ ರವರು ಮಾತನಾಡಿ 207 ನೇ ಕೋರೇಗಾಂವ್ ಕ್ರಾಂತಿಯ ಬಗ್ಗೆ ಪ್ರತಿಯೊಬ್ಬರೂ ತಿಳಿದು ಕೊಳ್ಳಬೇಕು ಇತಿಹಾಸದಲ್ಲಿ ಮುಚ್ಚಿಹೋದ ಸಾಹಸದ ಘಟನೆ. ಮೂವತ್ತು ಸಾವಿರ ಸೈನಿಕರನ್ನು ಕೇವಲ 500 ಜನ ಸೈನಿಕರು ಸೇರಿಕೊಂಡು ಸೋಲಿಸಿದ ಕದನ. ಪೇಶ್ವೆಗಳ ಆಡಳಿತದಲ್ಲಿದ್ದ ಜಾತಿ, ಅಸ್ಪೃಶ್ಯತೆ, ಮೇಲು ಕೀಳುಗಳ ವಿರುದ್ಧ ಸೆಟೆದು ನಿಂತು ಮಾನವೀಯ ಮೌಲ್ಯಗಳನ್ನು ಪಡೆದುಕೊಳ್ಳಲು ಹಂಬಲಿಸುವ ಮಹರ್ ಸೈನಿಕರ ಧೈರ್ಯ ಸಾಹಸ, ಕೆಚ್ಚೆದೆಯ ಹೋರಾಟ. ಶೋಷಿತರು ಮೇಲ್ಜಾತಿ ಶೋಷಕರ ವಿರುದ್ಧ, ಅವರ ಶೋಷಣೆಯ ನಡವಳಿಕೆಯ ವಿರುದ್ಧ ಯುದ್ಧ ಘೋಷಿಸಿದ, ನಡೆಸಿ ಪಡೆದ ಗೆಲುವು. ಅದು ಭೀಮಾ ತೀರದಲ್ಲಿ ನಡೆದಿದ್ದರಿಂದ ಅದು ಇತಿಹಾಸದಲ್ಲಿ 'ಭೀಮಾ ಕೋರೇಗಾಂವ್ ಯುದ್ಧವೆಂದೇ ಪ್ರಸಿದ್ಧವಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ನೈಜ ಇತಿಹಾಸವನ್ನು ಕೆದಕಿ ತಿಳಿಸಿದ್ದಾರೆ ಎಂದರು.

ಉಪನ್ಯಾಸಕ ಹಾಗೂ ಸಂಘದ ಕಾರ್ಯದರ್ಶಿ ಎಸ್ ನಂಜುಂಡಯ್ಯರವರು 76 ನೇ ಗಣರಾಜ್ಯೋತ್ಸವದ ಬಗ್ಗೆ ವಿವರವಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಭೀಮ್ ಸೇನಾ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎನ್ ರಮೇಶ್, ಉಪಾಧ್ಯಕ್ಷ ಕೆ. ಪಶುಪತಿ ಕಾರ್ಯದರ್ಶಿ ಎಸ್ ನಂಜುಂಡಯ್ಯ , ಖಜಾಂಚಿ ಶಿವಕುಮಾರ್, ಮಹಿಳಾ ಸಂಘದ ಅಧ್ಯಕ್ಷ ಸಾವಿತ್ರಿ ಎಚ್ ಎನ್, ಉಪಾಧ್ಯಕ್ಷೆ ಶಿವಮ್ಮ, ಕಾರ್ಯಾಧ್ಯಕ್ಷ ಕೆಂಚಪ್ಪ, ಬಿ ಮಧುಸೂದನ್, ಕೆ ಎಂ ಮಧುಸೂದನ್, ಮಹಾಲಿಂಗ ಪ್ರಜಾ ವಿಮೋಚನಾ ಸಂಘ, ಕಾರ್ಯದರ್ಶಿ ಸಾವಕಯ್ಯ, ಸ್ವಾಮಿ, ನಟೇಶ್, ಡಿ ಎಸ್ ಎಸ್ ನಾಗಣ್ಣ, ಮಧುಸೂದನ್, ಟಿ ಮಧುಸೂದನ್, ವೆಂಕಟೇಶ್, ಮಹೇಂದ್ರ, ಸುಭಾಷ್, ನಾಗರಾಜು ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

**ವರದಿ ಉಸ್ಮಾನ್ ಖಾನ್**

# 76ನೇ ಗಣರಾಜ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಿದ ಶಾಸಕ ಡಾ. ಎನ್ ಟಿ ಶ್ರೀನಿವಾಸ್

ವಿಜಯನಗರ ಜಿಲ್ಲೆಯ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಪಟ್ಟಣದ ಶ್ರೀ ಮಹಾದೇವ ಮೈಲಾರ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿದ್ದ 76 ನೇ ಗಣರಾಜ್ಯೋತ್ಸವದಲ್ಲಿ ದಿ. 26–01–2025 ರಂದು ರಾಷ್ಟ್ರ ಧ್ವಜಾರೋಹಣ ನೆರವೇರಿಸಿದ ಬಳಿಕ ಮಾತನಾಡುತ್ತಾ ಇಂದು ನಮ್ಮ ಮಹಾನ್ ರಾಷ್ಟ್ರದ 76 ನೇ ಗಣರಾಜ್ಯೋತ್ಸವವನ್ನು ಆಚರಿಸಲು ನಾವು ಒಟ್ಟುಗೂಡುತ್ತೇವೆ, ಇದು 26 ಜನವರಿ 1950 ರಂದು ಭಾರತೀಯ ಸಂವಿಧಾನದ ಅನುಷ್ಠಾನವನ್ನು ಗುರುತಿಸುವ ದಿನವಾಗಿದೆ. ಈ ಐತಿಹಾಸಿಕ ದಿನವು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು



ಪ್ರಜಾಪ್ರಭುತ್ವ, ಸಮಾನತೆಯ ಮೌಲ್ಯಗಳನ್ನು ನೆನಪಿಸುತ್ತದೆ, ಮತ್ತು ನ್ಯಾಯ,ನಮ್ಮ ಭಾರತ ವಿವಿಧ ರೀತಿಯಲ್ಲಿ ಹಂಚಿ ಹೋದದ್ದನ್ನೂ, ಗಮನದಲ್ಲಿಟ್ಟುಕೊಂಡು, ಸರ್ವ ರೀತಿಯಲ್ಲಿ ಸಾಮಾಜಿಕ ನ್ಯಾಯದ ಸಂವಿಧಾನ ಅಡಿಯಲ್ಲಿ ಪ್ರತಿಯೊಬ್ಬರೂ ಶ್ರಮಿಸುತ್ತಾ ಬಂದಿದ್ದಾರೆ. ಬಾಬಾ ಸಾಹೇಬ ಅಂಬೇಡ್ಕರ್ ಅವರನ್ನು ಸ್ಮರಿಸುತ್ತಾ ಈ ದಿನ ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸುತ್ತಾ ಬಂದಿದ್ದೇವೆ ನಾವೆಲ್ಲರೂ, ನಮ್ಮ ತಂದೆಯವರು ಹಾಗೂ ಮಾಜಿ ಶಾಸಕರಾದ ದಿ. ಎನ್. ಟಿ. ಬೊಮ್ಮಣ್ಣನವರು ಅವರು ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿ ಶಾಸಕರಾದ ವೇಳೆ ತಮ್ಮದೇ ಆದ ರೀತಿಯಲ್ಲಿ, ಆಯಾ ಊರುಗಳಿಗೆ ರಸ್ತೆ ಕಾಣದ ಊರುಗಳಿಗೆ ಮಣ್ಣಿನ ರಸ್ತೆಗಳನ್ನು ನಿರ್ಮಿಸಿದ್ದಾರೆ. ಇವತ್ತು ಅಂತಹ ರಸ್ತೆಗಳಿಗೆ ನಮ್ಮಿಂದ ಸಿಮೆಂಟ್ ರಸ್ತೆ, ಟಾರು ರಸ್ತೆ ನಿರ್ಮಿಸುವಂತದ್ದು ಸಂತಸ ತಂದಿದೆ. ತಂದೆಯ ಆಸೆಯ ನುಡಿಗಳನ್ನು ನಾನು ನೆರವೇರಿಸಲು ಹಾಗೂ ಈ ಕ್ಷೇತ್ರದ ಜನತೆಯ ಒಳಿತಿಗಾಗಿ ಸದಾ ಸಿದ್ದನಾಗಿದ್ದೇನೆ ಎಂದರು.

**ವರದಿ: ಗುರುರಾಜ್ ಎಲ್, ಕಲ್ಲಹಳ್ಳಿ ಟಿ**

# ಕ.ರ.ವೇ ನಾರಾಯಣ ಗೌಡರ ಬಣದ ವತಿಯಿಂದ ಕಲಾದಗಿ ಬಂದ್ ಯಶಸ್ವಿ

ಬಾಗಲಕೋಟೆ ಜಿಲ್ಲೆ ಕಲಾದಗಿಯಲ್ಲಿ ದಿ. 27.01.2024 ರ ಸೋಮವಾರದಂದು ಹೊರ ರಾಜ್ಯದ ವ್ಯಾಪಾರಿಗಳನ್ನು ತೊಲಗಿಸಿ ಕನ್ನಡಿಗ ವ್ಯಾಪಾರಸ್ಥರ ರಕ್ಷಣೆಗಾಗಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣ ಗೌಡರ ಬಣ)ಯ ಬಾಗಲಕೋಟೆ ಜಿಲ್ಲಾ ಘಟಕದ ನೇತೃತ್ವದಲ್ಲಿ ಕಲಾದಗಿ ಗ್ರಾಮದ ವ್ಯಾಪಾರಸ್ಥರ ಸಹಯೋಗದೊಂದಿಗೆ ಕಲಾದಗಿ ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಲಾಯಿತು. ಇಡೀ ಮಾರುಕಟ್ಟೆಯನ್ನು ಬಂದ್ ಮಾಡಿ ಸಹಕ–ರಿಸಿದ ಎಲ್ಲಾ ವ್ಯಾಪಾರಸ್ಥರಿಗೆ, ಕರವೇ ಕಾರ್ಯಕರ್ತ–ರಿಗೆ ಮತ್ತು ಪತ್ರಕರ್ತರಿಗೆ ಕಲಾದಗಿ ಅಂಗಡಿ ಮಾಲೀಕರು ವ್ಯಾಪಾರಸ್ಥರು ಊರಿನ ಪ್ರಮುಖರು ಧನ್ಯವಾದಗಳನ್ನು ಹೇಳಿದರು.

ಈ ಸಂದರ್ಭದಲ್ಲಿ ಕ.ರ.ವೇ ಜಿಲ್ಲಾಧ್ಯಕ್ಷರಾದ ಬಸವರಾಜ ಧರ್ಮಂತಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ರಾಜೇಶ್ವರಿ ಹಿರೇಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಸಂಗಮೇಶ ಅಂಬಿಗೇರ, ವಿದ್ಯಾರ್ಥಿ ಘಟಕದ ಅಧ್ಯಕ್ಷರು






ಗಣೇಶ ನಾಯಕ ಸೇರಿದಂತೆ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

**ವರದಿ : ನಿಂಬಯ್ಯ ವಿ ಕುಲಕರ್ಣಿ, ಬಾದಾಮಿ**

# ಸಮನ್ವಯ ಸಮಿತಿ ಸಭೆ



ನವದೆಹಲಿಯಲ್ಲಿ ದಿ.28–01–2025 ರ ಸೋಮವಾರದಂದು ಅಂಗವಿಕಲ ವ್ಯಕ್ತಿಗಳ ಮುಖ್ಯ ಆಯುಕ್ತರು ಆಯೋಜಿಸಿದ್ದ ಸಮನ್ವಯ ಸಮಿತಿ ಸಭೆಯಲ್ಲಿ ಭಾರತೀಯ ದಿವ್ಯಾಂಗ ಸಬಲೀಕರಣ ಸಂಘದ (ನೋಂದಣಿ) ಸ್ಥಾಪಕ ಅಧ್ಯಕ್ಷ ಕೊಡಕ್ಕಲ್ ಶಿವಪ್ರಸಾದ್ ಅವರು ಸಕ್ರಿಯವಾಗಿ ಭಾಗವಹಿಸಿದರು.

ಚಿತ್ರದಲ್ಲಿ ಭಾರತ ಸರಕಾರದ ಅಂಗವಿಕಲ ವ್ಯಕ್ತಿಗಳ ಉಪ ಮುಖ್ಯ ಆಯುಕ್ತರಾದ ಶ್ರೀ ಪ್ರವೀಣ್ ಕುಮಾರ್ ಅಂಬಾಸ್ತ, ವಕೀಲ ಶ್ರೀ ರಾಹುಲ್ ಬಜಾಜ್, ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಮುಖ್ಯ ಕಾರ್ಯದರ್ಶಿ ಶ್ರೀ ರಾಜೇಶ್ ಅಗರ್ವಾಲ್ ಮತ್ತು ಇತರರನ್ನು ಕಾಣಬಹುದು.

ಕರುನಾಡ ಕಂದ
ಸಂಪುಟ 04 | ಸಂಚಿಕೆ 07
ದಿನಾಂಕ: 01-02-2025 ಪುಟಗಳು:16

# ಗ್ರಾಮ ಪಂಚಾಯತಿಯಿಂದ ನಿಮ್ಮ ಆಸ್ತಿಗೆ ಪಡೆಯಬಹುದಾದ ನಮೂನೆ–9 ಮತ್ತು ನಮೂನೆ–11 ಕುರಿತಾದ ಕಿರು ಪರಿಚಯ

ನಮೂನೆ–9 – ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006, ತಿದ್ದುಪಡಿ ನಿಯಮಗಳು 2013 ರ ಪ್ರಕಾರ, ನಿಯಮ 28 ರ ಅಡಿಯಲ್ಲಿ ಉಲ್ಲೇಖಿಸಲಾದ ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಕೃಷಿಯೇತರ ಆಸ್ತಿಗಳಿಗಾಗಿ ಗ್ರಾಮ ಪಂಚಾಯತ್ ನೀಡುವ ದಾಖಲೆಯಾಗಿದೆ.

**ಈ ಆಸ್ತಿಗಳಿಗೆ ಮಾತ್ರ –**

ಎ) ಆಯಾ ಕಂದಾಯ ಇಲಾಖೆ ಕಛೇರಿಯಿಂದ ಕರ್ನಾಟಕ ಭೂಕಂದಾಯ ಕಾಯಿದೆ, 1964 ರ ನಿಬಂಧನೆಗಳ ಪ್ರಕಾರ ಸರಿಯಾಗಿ ಪರಿವರ್ತಿಸಲಾದ ಮತ್ತು ಆಯಾ ನಗರಾಭಿವೃದ್ಧಿ ಇಲಾಖೆ ಯೋಜನಾ ಮಂಜೂರಾತಿ ಕಚೇರಿಯಿಂದ, ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ ಮತ್ತು ಇತರ ಸಂಬಂಧಿತ ಅಧಿನಿಯಮಗಳ ಪ್ರಕಾರ ಮಂಜೂರಾದ ಆಸ್ತಿಗಳಿಗೆ ನೀಡಲಾಗುತ್ತದೆ.

ಬಿ)ಬಸವ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆ ಸರ್ಕಾರಿ ವಸತಿ ಯೋಜನೆ ಫಲಾನುಭವಿಗಳ ಆಸ್ತಿಗಳಿಗೆ ನೀಡಲಾಗುತ್ತದೆ.

ಸಿ) ಕಂದಾಯ ಇಲಾಖೆಯ ಪ್ರಕಾರ ಗ್ರಾಮದ ಗ್ರಾಮಠಾಣೆಯಲ್ಲಿ ಸ್ಥಳವಿದೆ ಎಂದು ಪ್ರಮಾಣೀಕರಿಸುವ ಸ್ಕೆಚ್ ಮೂಲಕ ತಹಶೀಲ್ದಾರ್ ದೃಢೀಕರಿಸಿದ ಆಸ್ತಿಗಳಿಗೆ.

2. ನಮೂನೆ–11 – ಎಂಬುದು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006, ತಿದ್ದುಪಡಿ ನಿಯಮಗಳು 2013 ರ ಪ್ರಕಾರ ನಿಯಮ 30 ರ ಅಡಿಯಲ್ಲಿ ಉಲ್ಲೇಖಿಸಲಾದ ಗ್ರಾಮ ಪಂಚಾಯತ್ ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಕೃಷಿಯೇತರ ಆಸ್ತಿಗಳಿಗಾಗಿ ನೀಡುವ ದಾಖಲೆಯಾಗಿದೆ. ಫಾರ್ಮ್–11 ರಿಜಿಸ್ಟರ್ ಅನ್ನು ಭೂಮಿ ಮತ್ತು ಕಟ್ಟಡದ ಬೇಡಿಕೆ, ಸಂಗ್ರಹಣೆ ಮತ್ತು ಬಾಕಿ ರಿಜಿಸ್ಟರ್ ಎಂದೂ ಕರೆಯಲಾಗುತ್ತದೆ. ಯಾವುದೇ ವರ್ಗಗಳ ಅಡಿಯಲ್ಲಿ ಬರದ, ಆದರೆ ಈಗಾಗಲೇ ಅಸ್ತಿತ್ವದಲ್ಲಿರುವ ಬೇಡಿಕೆ ನೋಂದಣಿಯ ಭಾಗವಾಗಿರುವ ಆಸ್ತಿಗಳಿಗೆ ನಮೂನೆ–11 ಅನ್ನು ನೀಡಬಹುದು.

3. ನಮೂನೆ –9 ಮತ್ತು ನಮೂನೆ –11 ಗಳ ಪ್ರಯೋಜನ – ಗ್ರಾಮ ಪಂಚಾಯಿತಿಗಳಿಗೆ ನಮೂನೆ ಸಂಖ್ಯೆ 9 ಮತ್ತು 11 ಮೂಲಭೂತವಾಗಿ ಆಸ್ತಿ ತೆರಿಗೆ ಸಂಗ್ರಹಕ್ಕೆ ಸಾಧನಗಳಾಗಿವೆ. ಗ್ರಾಮ ಪಂಚಾಯಿತಿಗಳು ಸ್ಥಳೀಯ ನಾಗರಿಕ ಸಂಸ್ಥೆಗಳಾಗಿದ್ದು,




ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ, 1993 ರ ಸೆಕ್ಷನ್ 199 ರ ಪ್ರಕಾರ ಆಸ್ತಿ ತೆರಿಗೆ ಸಂಗ್ರಹಿಸಲು ಅಧಿಕಾರ ಹೊಂದಿವೆ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ಕೃಷಿಯೇತರ ಆಸ್ತಿಗಳಿಗೆ ನೋಂದಣಿ ನಡೆಸಲು ನಮೂನೆ–9 ಮತ್ತು ನಮೂನೆ–11 ದಾಖಲೆಗಳನ್ನು ಕಡ್ಡಾಯಗೊಳಿಸಲಾಗಿದೆ. ಆದ್ದರಿಂದ ತಮ್ಮ ಆಸ್ತಿಯನ್ನು ಮಾರಾಟ ಮಾಡಲು ಬಯಸುವ ನಾಗರೀಕರು ಗ್ರಾಮ ಪಂಚಾಯಿತಿಗಳಲ್ಲಿ ನಮೂನೆ 9 ಮತ್ತು 11 ಕ್ಕೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

4. ನಮೂನೆ 9 ಗಾಗಿ ಗ್ರಾಮ ಪಂಚಾಯತ್ ನಲ್ಲಿ ಅರ್ಜಿಯನ್ನು ಸಲ್ಲಿಸುವ ವಿಧಾನ – ಫಾರ್ಮ್–9 ನೀಡುವುದಕ್ಕಾಗಿ ಗ್ರಾಮ ಪಂಚಾಯತ್ ಗಳಲ್ಲಿ ಅರ್ಜಿ ಸಲ್ಲಿಸಲು ಅರ್ಜಿದಾರರು ಈ ಕೆಳಗಿನ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು

a) ಆಸ್ತಿ ಗ್ರಾಮಠಾಣೆ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಿಕೊಂಡಿದ್ದರೆ – ತಹಶೀಲ್ದಾರ್ ಸಮೀಕ್ಷೆ ಮಾಡಿ ಪ್ರಮಾಣೀಕರಿಸಿದ ಆಸ್ತಿ ಪ್ರಮಾಣಪತ್ರದೊಂದಿಗೆ ಗ್ರಾಮಠಾಣಾ ರೇಖಾಚಿತ್ರ.

b) ಆಸ್ತಿಯನ್ನು ಪರಿವರ್ತಿತ ಆಸ್ತಿ ಎಂದು ಹೇಳಿಕೊಂಡಿದ್ದರೆ, ಈ ಕೆಳಗಿನ ದಾಖಲೆಗಳ ಪ್ರತಿಗಳನ್ನು ಲಗತ್ತಿಸಬೇಕು–

- ಕಂದಾಯ ಇಲಾಖೆಯಿಂದ ಹೊರಡಿಸಲಾದ ಮಾಲೀಕತ್ವ ದಾಖಲೆಗಳು ಮತ್ತು ಪರಿವರ್ತನಾ ಆದೇಶ.
- ನಗರಾಭಿವೃದ್ಧಿ ಇಲಾಖೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಮಾಲೀಕತ್ವ ದಾಖಲೆಗಳು ಮತ್ತು ಯೋಜನಾ ಅನುಮೋದನೆ.

c) ಆಸ್ತಿಯನ್ನು ಸರ್ಕಾರಿ ವಸತಿ ಯೋಜನೆಯಲ್ಲಿ ನೀಡಲಾಗಿದ್ದರೆ – ಬಸವ ವಸತಿ, ಆಶ್ರಯ, ಇಂದಿರಾ ಆವಾಸ್ ಯೋಜನೆ ಮುಂತಾದವುಗಳಿಗೆ – ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಹಕ್ಕುಪತ್ರ ಮತ್ತು ಮಂಜೂರಾತಿ ಆದೇಶ.

ಈ ಮೂರು ವರ್ಗಗಳಿಗೆ, ಈ ದಾಖಲೆಗಳನ್ನು ಸಹ ಲಗತ್ತಿಸಬೇಕು – ಅರ್ಜಿದಾರರ ಛಾಯಾಚಿತ್ರ ಮತ್ತು ಪಡಿತರ ಚೀಟಿ, ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್, ಪಾಸ್ಪೋರ್ಟ್ನಂತಹ ಯಾವುದೇ ಐಡಿ ಮತ್ತು ವಿಳಾಸ ಪುರಾವೆಗಳು.

5. ಗ್ರಾಮ ಪಂಚಾಯಿತಿಗೆ ಫಾರ್ಮ್–9 ನೀಡಲು ತೆಗೆದುಕೊಳ್ಳುವ ಸಮಯ – ಗ್ರಾಮ ಪಂಚಾಯಿತಿಗಳು ನಮೂನೆ–9 ಅನ್ನು (ತೆರಿಗೆ ನಿರ್ಧಾರ ಪಟ್ಟಿ/ಮೌಲ್ಯಮಾಪನ ನೊಂದಣಿಗೆ ಬದಲಾವಣೆ) ಸಕಾಲ ಸೇವೆ ಎಂದು ಸೂಚಿಸಲಾಗಿದೆ ಮತ್ತು ಪ್ರತಿ ಗ್ರಾಮ ಪಂಚಾಯಿತಿಗೆ ಫಾರ್ಮ್–9 ನೀಡಲು 45 ದಿನಗಳನ್ನು ನೀಡಲಾಗಿದೆ.

6. ಫಾರ್ಮ್–9 ಮತ್ತು ಫಾರ್ಮ್–11 ನೀಡಲು ಯಾವುದೇ ನಿರ್ಬಂಧಗಳು – ಈ ಕೆಳಗಿನ ಯಾವುದೇ ವರ್ಗಗಳ ಅಡಿಯಲ್ಲಿ ಬರುವ ಆಸ್ತಿಗಳಿಗೆ ಮಾತ್ರ ಫಾರ್ಮ್–9 ಅನ್ನು ನೀಡಬಹುದು.

- ಗ್ರಾಮಠಾಣಾ ಠಾಣಗಳು.
- ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಸರಿಯಾಗಿ ಅನುಮೋದಿತ ವಿನ್ಯಾಸದಿಂದ ರಚಿಸಲಾದ ನಿವೇಶನಗಳು
- ವಿವಿಧ ಸರ್ಕಾರಿ ಫಲಾನುಭವಿ ಯೋಜನೆಗಳ ಅಡಿಯಲ್ಲಿ ಮಂಜೂರಾದ ನಿವೇಶನಗಳು. ನಮೂನೆ–9 ಹೊಂದಿರುವ ಎಲ್ಲಾ ಆಸ್ತಿಗಳಿಗೆ ಮತ್ತು ಮೇಲಿನ ಯಾವುದೇ ವರ್ಗಗಳ ಅಡಿಯಲ್ಲಿ ಬರದಿದ್ದರೆ, ಆದರೆ ಈಗಾಗಲೇ ಅಸ್ತಿತ್ವದಲ್ಲಿರುವ ಬೇಡಿಕೆ ನೋಂದಣಿಯ ಭಾಗವಾಗಿರುವ ಆಸ್ತಿಗಳಿಗೆ ನಮೂನೆ–11 ಅನ್ನು ನೀಡಬಹುದು.

7. ನಮೂನೆ–9 / ನಮೂನೆ–11 ಅನ್ನು ಯಾರಿಂದ ಪಡೆದುಕೊಳ್ಳುವುದು – ಗ್ರಾಮ ಪಂಚಾಯತ್ ಕಚೇರಿಯು ನಮೂನೆ 9 ಮತ್ತು 11 ಅನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತ್ ಕಾರ್ಯದರ್ಶಿ ಮೂಲಕ ನೀಡಲಾಗುತ್ತದೆ.

11. ಗ್ರಾಮ ಪಂಚಾಯಿತಿಗಳಿಗೆ ನೀಡಲಾದ ನಮೂನೆ–9 ಮತ್ತು ನಮೂನೆ–11 ರಲ್ಲಿ ಶಾಯಿ ಸಹಿ ಅಗತ್ಯ ವಿರುವುದಿಲ್ಲ – ಗ್ರಾಮ ಪಂಚಾಯಿತಿಗಳಿಂದ ನೀಡಲಾದ ಎಲ್ಲಾ ನಮೂನೆ–9 ಮತ್ತು ನಮೂನೆ–11 ಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಡಿಜಿಟಲ್ ಸಹಿ ಮಾಡುತ್ತಾರೆ; ಆದ್ದರಿಂದ ಈ ದಾಖಲೆಗಳಿಗೆ ಯಾವುದೇ ಗ್ರಾಮ ಪಂಚಾಯಿತಿ ಅಧಿಕಾರಿಗಳ ಶಾಯಿ ಸಹಿ ಅಗತ್ಯವಿಲ್ಲ.

**ಸಂಗ್ರಹ – ಕಿರಣ್ ಕೆ.ಟಿ, ವಕೀಲರು. ತುಮಕೂರು,**

## ಕರಡಿ ಕೃಷಿ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಸತತ ಐದನೇ ಬಾರಿಗೆ ಕೆ. ಆರ್. ದೇವರಾಜು ಅವಿರೋಧ ಆಯ್ಕೆ

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಕರಡಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಕರಡಿ ದೇವರಾಜು ಅವರು ಸತತ 5ನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಕೆ .ಆರ್. ದೇವರಾಜು, ಸಂಘದ ಸದಸ್ಯರು ನಮ್ಮ ಮೇಲೆ ಅಭಿಮಾನವಿಟ್ಟು ಆಡಳಿತ ಮಂಡಳಿಗೆ ಬಹುಮತದಿಂದ ಆಯ್ಕೆ ಮಾಡಿದ್ದು ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು. ಹಾಗೆಯೇ ನಮ್ಮಗಳ ಸಹಕಾರಿ ಮುಖಂಡರಾದ ಸಹಕಾರ ಸಚಿವರಾದ ಶ್ರೀ ಕೆ. ಎನ್. ರಾಜಣ್ಣನವರ ಮಾರ್ಗದರ್ಶನದಲ್ಲಿ ಸದಸ್ಯರಿಗೆ ಹಾಗೂ ರೈತ ಬಾಂಧವರಿಗೆ ಹೆಚ್ಚಿನ ಸೇವೆ ಸಲ್ಲಿಸುವುದಾಗಿ ತಿಳಿಸಿದರು ಹಾಗೂ ನಮ್ಮ ಸಂಘದ ರೈತ–ರಿಗೆ ಹೆಚ್ಚಿನ ಸಾಲ ಸೌಲಭ್ಯ ಹಾಗೂ ನೆರವನ್ನು ನೀಡುವಂತೆ ಸಹಕಾರ ಸಚಿವರು ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ ಎನ್ ರಾಜಣ್ಣನವರನ್ನು ಈ ಸಂದರ್ಭದಲ್ಲಿ ಕೋ–ರಿಕೊಂಡರು.

ಉಪಾಧ್ಯಕ್ಷರಾಗಿ ನ್ಯಾಕೇನಹಳ್ಳಿ ವೀರಣ್ಣ ಅವಿರೋಧವಾಗಿ ಆಯ್ಕೆಯಾದರು.



ಈ ಸಂದರ್ಭದಲ್ಲಿ ಸಂಘದ ನೂತನ ನಿರ್ದೇಶಕರುಗಳಾದ ಕರುಡಾಳು ಬಸವರಾಜು, ಕೊಟ್ಟಿಗೆಹಳ್ಳಿ ಶಿವಮೂರ್ತಿ, ಉಪ್ಪಿನಳ್ಳಿ ಜಯಣ್ಣ, ಕಟ್ಟೆಹಳ್ಳಿ ದೊಡ್ಡಲಿಂಗಯ್ಯ, ಶಿವಪುರ ಶೇಷಣ್ಣ, ಮಲ್ಲಿಪಟ್ಟಣ ಅಮೃತ ಶ್ರೀ, ಕೊಂಡ್ಲಿಘಟ್ಟ ಭಾರತಿ, ಮಲ್ಲಿಪಟ್ಟಣ ಮಲ್ಲೇಶಯ್ಯ, ಅಣ್ಣ ಮಲ್ಲೇನಹಳ್ಳಿ ಕೃಷ್ಣಯ್ಯ, ಶಿಡ್ಲೆಹಳ್ಳಿ ಜಯಣ್ಣ, ಡಿ.ಸಿ.ಸಿ ಬ್ಯಾಂಕಿನ ಮೇಲ್ವಿಚಾರಕರಾದ ಟಿ.ಪಿ ಉಮಾಶಂಕರ್ ಸೇ–ರಿದಂತಹ ಸಂಘದ ಸದಸ್ಯರು ಹಾಜರಿದ್ದರು.

ಚುನಾವಣಾ ಅಧಿಕಾರಿಯಾಗಿ ಸಹಕಾರ ಇಲಾಖೆಯ ಶ್ರೀರಂಗನಾಥ್ ಕರ್ತವ್ಯ ನಿರ್ವಹಿಸಿದರು. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮನು ಎಸ್. ಎಂ. ಹಾಗೂ ಸಿಬ್ಬಂದಿ ವರ್ಗ ಚುನಾವಣೆಯಲ್ಲಿ ಕಾರ್ಯನಿರ್ವಹಿಸಿದರು.

"ಕರುನಾಡ ಕಂದ ಪತ್ರಿಕೆ"
ನ್ಯೂಸ್ ಪೋರ್ಟಲ್
ಹಾಗೂ ಯೂಟ್ಯೂಬ್ ಚಾನೆಲ್ ಗೆ
ಪಾರ್ಟ್/ಫುಲ್ ಟೈಮ್ ನಲ್ಲಿ
ಕಾರ್ಯ ನಿರ್ವಹಿಸಲು
ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲೂಕು
ಮಟ್ಟದಲ್ಲಿ ಸ್ಥಳೀಯ ವರದಿಗಾರರು
ಬೇಕಾಗಿದ್ದಾರೆ.

18 ವರ್ಷದಿಂದ 45 ವರ್ಷದವರೆಗಿನ
ಆಸಕ್ತರು ಸಂಪರ್ಕಿಸಬಹುದು.

TARGET ಇರುವುದಿಲ್ಲ

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹೆಸರು,
ತಾಲ್ಲೂಕು ವಾಟ್ಸ್ ಆಪ್ ಮಾಡಿ ಅಥವಾ
ಕರೆ ಮಾಡಿ:

ಬಸವರಾಜ ಬಳಿಗಾರ, ಸಂಪಾದಕರು
Call & WhatsApp:
9986366909
www.karunadakanda.com




KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR